4.	ಮಂಡ್ಯ	11	—
5.	ಕೊಡಗು	5	—
6.	ಹಾಸನ	13	—
7.	ದಕ್ಷಿಣ ಕನ್ನಡ	15	—
8.	ಶಿವಮೊಗ್ಗ	6	—
9.	ಚಿಕ್ಕಮಗಳೂರು	15	—
10.	ಚಿತ್ರದುರ್ಗ	22	—
11.	ತುಮಕೂರು	2	—
12.	ಧಾರವಾಡ	29	—
13.	ಉತ್ತರ ಕನ್ನಡ	8	—
14.	ಬೆಳಗಾಂ	20	—
15.	ಬಿಜಾಪುರ	22	—
16.	ಗುಲ್ಬರ್ಗ	13	—
17.	ಬೀದರ್	12	—
18.	ರಾಯಚೂರು	23	—
19.	ಬಳ್ಳಾರಿ	11	—
		293	—

ಶ್ರೀ ಎಂ. ಚಂದ್ರಶೇಖರಿತ್ (ನಗರಾಭಿವೃದ್ಧಿ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, 1964ನೇ ಇಸವಿಯ ಬೆಂಗಳೂರು ನೀರು ಸರಬರಾಜು ಹಾಗೂ ಗ್ರಾಮಸಾರ ಮಂಡಲಿಯ ಶಾಸನದ 17(3)ನೇ ಕಲಮಿನ ಮೇರೆಗೆ — 1982-83 ಹಾಗೂ 1983-84ನೇ ಸಾಲುಗಳಿಗೆ ಸಂಬಂಧಿಸಿದ ಬೆಂಗಳೂರು ನೀರು ಸರಬರಾಜು ಹಾಗೂ ಗ್ರಾಮಸಾರ ಮಂಡಲಿಯ ವಾರ್ಷಿಕ ಹಣಕಾಸಿನ ಪಟ್ಟಿಯನ್ನು ನಾನು ಈ ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.— ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಶ್ರೀ ಬಿ.ಹೆಚ್. ಯಂಕಾನಾಯಕ.— ಮಾನ್ಯ ಅಧ್ಯಕ್ಷರೆ, ನನ್ನ ಮೊದಲನೇ ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದಿರಿ, ಕೊಡಲಿಲ್ಲ.

ಅಧ್ಯಕ್ಷರು — ಆ ಪ್ರಶ್ನೆ ಹೆಲ್ಡ್ ಓವರ್ ಆಗಿದೆ ಎಂದು ಆಗಲೇ ಹೇಳಿದೆನಲ್ಲ. ಈಗ 334ನೇ ಸೂಚನೆ ಮೇರೆಗೆ ಮಾನ್ಯ ಶ್ರೀ ವೀರಪ್ಪ ಮೊಯ್ಲಿಯವರು ಶ್ರೀ ಎಸ್.ಆರ್. ಮೋರೆ, ಶ್ರೀ ಎನ್. ಚಿಕ್ಕೇಗೌಡ, ಶ್ರೀ ಬಿ.ಎಸ್. ಯಡಿಯೂರಪ್ಪ, ಶ್ರೀ ಎಸ್. ಬಂಗಾರಪ್ಪ ಮತ್ತು ಶ್ರೀ ಪಿ. ರಾಮದೇವ್ ಅವರು ಕಳುಹಿಸಿಕೊಟ್ಟಿದ್ದಾರೆ. ಅದನ್ನು ಈಗ ತೆಗೆದುಕೊಳ್ಳುತ್ತೇನೆ. ಈಗ ಶ್ರೀ ವೀರಪ್ಪ ಮೊಯ್ಲಿಯವರು ಮಾತನಾಡಬಹುದು.

ನಿಯಮ 334ರ ಮೇರೆಗೆ

ವಿಷಯ : ದೊಡ್ಡಬಳ್ಳಾಪುರದ ವಿದ್ಯುತ್ ಪೂರೈಕೆ ಅಭಾವದ ಬಗ್ಗೆ ನೇಕಾರರ ಪ್ರತಿಭಟನೆ ಮತ್ತು ತತ್ಪರಿಣಾಮವಾಗಿ ನಡೆದ ಗಲಭೆ

ಶ್ರೀ ಎಂ. ವೀರಪ್ಪ ಮೊಯ್ಲಿ.— ಮಾನ್ಯ ಸಭಾಧ್ಯಕ್ಷರೇ, ನಿನ್ನೆ ಬೆಳಿಗ್ಗೆ ಸುಮಾರು 9-30 ಗಂಟೆ ಸಮಯದಲ್ಲಿ ದೊಡ್ಡಬಳ್ಳಾಪುರದಲ್ಲಿ ಸುಮಾರು 10–15 ಸಾವಿರ ನೇಕಾರರು ಒಂದು ದೊಡ್ಡ ಮೆರವಣಿಗೆಯನ್ನು ತೆಗೆದುಕೊಂಡು ಹೋದರು. ಅವರು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನಿಯರ್ ಆಫೀಸ್ ಕೆ.ಇ.ಬಿ.ಅಲ್ಲಿಗೆ ಹೋಗಿ ಘೇರಾವ್ ಮಾಡುವ ಸಂದರ್ಭದಲ್ಲಿ ದೊಡ್ಡ ಗಲಾಟೆಯೇ ನಡೆಯಿತು. ಅದು ಬರಬರುತ್ತಾ ವಿಪರೀತ ಗೊಂದಲ ಉಂಟಾಗಿ ಸಾರ್ವಜನಿಕರ ಆಸ್ತಿಪಾಸ್ತಿಗಳನ್ನು ಲೂಟಿ ಮಾಡಿದ್ದಾರೆ, ಕೆಲವು ಕಡೆ ಬೆಂಕಿ ಹಚ್ಚಿದ್ದಾರೆ, ವಿಶೇಷತಃ ಪರ್ಸನಲ್ ಪ್ರಾಪರ್ಟಿಗೆ ಬಹಳ ನಷ್ಟ; ನಿನ್ನೆ ದಿವಸ ಅಲ್ಲಿ ಉಂಟಾಗಿದೆ. ಈ ದೊಡ್ಡಬಳ್ಳಾಪುರ ಎಂದರೆ ಅದನ್ನು ಕರ್ನಾಟಕದ ಒಂದು ಮಂಚೆಸ್ಟರ್ ಎಂದು ಕರೆಯುತ್ತಾರೆ. ಏತಕ್ಕೆಂದರೆ ಅಲ್ಲಿ ಸುಮಾರು 15 ಸಾವಿರ ನೇಕಾರರು ಇದ್ದಾರೆ. ಸುಮಾರು 40 ಸಾವಿರದವರೆಗೆ ಪವರ್ ಲೂಮ್ಸ್ ಇದೆ. ಅವರಿಗೆ ವಿದ್ಯುತ್ ತೊಂದರೆಯಾಗದೇ ಹೋದರೆ ಅವರು ಒಂದು ದಿವಸಕ್ಕೆ ಸುಮಾರು 15-20 ರೂಪಾಯಿನವರೆಗೆ ಸಂಪಾದನೆ ಮಾಡಿಕೊಳ್ಳುತ್ತಾರೆ. ಇಲ್ಲದೇ ಹೋದರೆ ಒಂದು ದಿವಸಕ್ಕೆ 5 ರೂಪಾಯಿ ಕೂಡ ಸಂಪಾದನೆ ಮಾಡುವುದಕ್ಕಾಗುವುದಿಲ್ಲ. ಈ ವಿಚಾರ ತಮಗೂ ಗೊತ್ತಿದೆ. ಬರೇ ಲೆಕ್ಕಕ್ಕೆ ಮಾತ್ರ ಗ್ರಾಮಾಂತರ ಪ್ರದೇಶದಲ್ಲಿ 3 ಗಂಟೆಕಾಲ

ಮಾತ್ರ ಪವರ್ ಕಟ್ ಅನ್ನುತ್ತಾರೆ. ಡಿಶಂಬರ್ ತಿಂಗಳಲ್ಲಿ ಈ ಬಗ್ಗೆ ಮಾನ್ಯ ಸಚಿವರು ಒಂದು ಹೇಳಿಕೆ ಕೊಟ್ಟರು ಗ್ರಾಮಾಂತರ ಪ್ರದೇಶಗಳಲ್ಲಿರುವ ಕೃಷಿಕರಿಗೆ ಈಗಲೂ ಕೂಡ 6 ಗಂಟೆಕಾಲ ಪವರ್ ಕಟ್ ಇದ್ದೇ ಇದೆ. ಈ ದೊಡ್ಡ ಬಳ್ಳಾಪುರದಲ್ಲಿ ಈ ಶುಕ್ರವಾರದಿಂದ ಲೋಡ್ ಷೆಡ್ಡಿಂಗ್ ಮತ್ತು ಪವರ್ ಕಟ್ ವಿಪರೀತವಾಗಿ, ಅಲ್ಲಿನ ನೇಕಾರರಿಗೆ ಬಹಳ ತೊಂದರೆಯಾಗಿದೆ. ಅದಕ್ಕಾಗಿ ಅವರು ದಂಗೆ ಎದ್ದು ಈ ಒಂದು ಮೆರವಣಿಗೆಯನ್ನು ತೆಗೆದುಕೊಂಡು ಹೋದರು. ಅವರು ಅಲ್ಲಿರುವ ಟಿ.ಎ.ಪಿ.ಸಿ.ಎಂ. ಮತ್ತು ಪಿ.ಎಲ್.ಡಿ.ಬಿ.ಗೆ ಹೋಗಿ ಅಟ್ಯಾಕ್ ಮಾಡಿದ್ದಾರೆ. ಈ ಒಂದು ಘಟನೆ ವಿಚಾರದಲ್ಲಿ ಈಗಾಗಲೇ ಸಾಕಷ್ಟು ವಿಚಾರಗಳು ಪತ್ರಿಕೆಗಳಲ್ಲಿ ಬಂದಿವೆ. ಈ ಬಗ್ಗೆ ವೀಕ್ಷಣೆ ಮಾಡಿದವರೇ ಹೇಳಿದ್ದಾರೆ. ಅದು ಪತ್ರಿಕೆಯಲ್ಲೂ ಸಹ ಬಂದಿದೆ. ಈ ಒಂದು ಗುಂಪಿಗೆ ಸೇರಿದ ನೇಕಾರರು ಏನು ಇದ್ದಾರೆ ಅವರು ಯಾವ ಒಂದು ಮಹತ್ವದ ಆಸೆಗಾಗಲಿ, ಯಾವ ಒಂದು ಪ್ರಭಾವಕ್ಕಾಗಲಿ ಒಳಗಾಗದೇ ತಾವೇ ತಾವಾಗಿ ಮುಂದೆ ಬಂದದ್ದು ಈ ಒಂದು ಮೆರವಣಿಗೆಯಲ್ಲಿ ಕಂಡುಬಂತು ಎಂದು ಹೇಳಿದ್ದಾರೆ. ಆ ಕ್ಷೇತ್ರದಿಂದ ಚುನಾವಣೆಯಲ್ಲಿ ಆರಿಸಿ ಬಂದಂಥ ಮಾನ್ಯ ಸಚಿವರಾದ ಶ್ರೀ ಜಾಲಪ್ಪನವರು ಹಾಗೇನೂ ಇಲ್ಲ. ಇದು ಪೂರ್ವಯೋಜಿತವಾದದ್ದು. ಇದರ ಹಿಂದೆ ಏನೋ ಕೈವಾಡ ಇದೆ ಎಂದು ಹೇಳಿಕೆ ಕೊಟ್ಟಿದ್ದಾರೆ. ಈ ಒಂದು ಘಟನೆಯ ಹಿನ್ನೆಲೆಯೇ ಬೇರೆ. ಇದು ದೊಡ್ಡ ಬಳ್ಳಾಪುರಕ್ಕೆ ಒಂದಕ್ಕೇನೇ ಸೀಮಿತವಾಗಿಲ್ಲ.

ಅಧ್ಯಕ್ಷರು.— 334ನೆಯ ಸೂಚನೆಯ ಮಿತಿಯಲ್ಲಿ ಮಾತನಾಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅದಕ್ಕೆ ಸೀಮಿತವಾಗಿಯೇ ನಾನು ಮಾತನಾಡುತ್ತೇನೆ. ನಾನು ದೊಡ್ಡ ಬಳ್ಳಾಪುರದ ಬಗ್ಗೆ ಏತಕ್ಕೆ ವಿಶೇಷವಾಗಿ ಮಾತನಾಡುತ್ತೇನೆಂದರೆ, ಇದರಲ್ಲಿ ಸರ್ಕಾರ ಹಾಗೂ ಕೆ.ಇ.ಬಿ. ಇವರಿಬ್ಬರ ಒಂದು ಕಾರ್ಯ ನಿರ್ವಹಣೆ ಬಗ್ಗೆ ಅಲ್ಲಿ ಉಂಟಾದ ಪರಿಸ್ಥಿತಿಯಿಂದ ಏನು ಒಂದು ದೊಡ್ಡ ದಂಗೆ ಎದ್ದಿದೆ ಅದಕ್ಕೋಸ್ಕರ ಹೇಳುತ್ತಿದ್ದೇನೆ. ಇಡೀ ಕರ್ನಾಟಕ ರಾಜ್ಯದ ರೈತರು ಮತ್ತು ಗ್ರಾಮಾಂತರ ಪ್ರದೇಶದ ರೈತರು ಅದನ್ನು ಎದುರು ನೋಡುತ್ತಿರುವುದರಿಂದ ವಿಶೇಷವಾಗಿ ಮಾತ ನಾಡುತ್ತಿದ್ದೇನೆ. ತಾವು ಗ್ರಾಮಾಂತರ ಪ್ರದೇಶದಿಂದ ಬಂದಂಥಾವರು. ಅಲ್ಲಿ 6 ಗಂಟೆ ಕಾಲ ಪವರ್ ಕಟ್ ಆದರೆ ಪುನಃ ಅದು ಇನ್ನೂ ಒಂದು ಗಂಟೆ ಕಾಲ ಬರುವುದಿಲ್ಲ. ಅಲ್ಲದೆ ಸುಮಾರು 20-25 ಸಲ ಡ್ರಿಪ್ಪಿಂಗ್ ಆಗುತ್ತದೆ. ಒಂದು ಗಂಟೆ ಕಾಲ ಪಂಪ್‌ಸೆಟ್‌ನಲ್ಲಿ ನೀರು ಬಿಟ್ಟರೂ ಅದು ಅರ್ಧ ಎಕರೆಗೂ ಹಾಯುವುದಿಲ್ಲ. ಏತಕ್ಕೆಂದರೆ, ಅದು ಮಧ್ಯೆ ಮಧ್ಯೆ ಡ್ರಿಪ್ಪಿಂಗ್ ಆಗುತ್ತದೆ. ಕೆಲವು ಸಂದರ್ಭದಲ್ಲಿ ಚಾನಲ್ ಡ್ರೈ ಆಫ್ ಆಗಿಬಿಡುತ್ತವೆ. ಆದುದರಿಂದ ಒಂದು ಎಕರೆಗೆ ನೀರು ಹಾಯಿಸಬೇಕಾದರೆ ಕೊನೇ ಪಕ್ಷ 2-3 ಗಂಟೆ ಕಾಲವಾದರೂ ಬೇಕಾಗುತ್ತದೆ. ಈ ಲೋ ವೋಲ್ಟೇಜ್, ಪವರ್ ಕಟ್ ಡಿಮ್ಯಾಂಡ್ ಕಟ್ ಇವೆಲ್ಲವನ್ನು ನೋಡಿದರೆ ಗ್ರಾಮಾಂತರ ಪ್ರದೇಶದ ಜನರಿಗೆ ಅದರಲ್ಲೂ ಕೃಷಿ ಕಾರ್ಮಿಕರಿಗೆ ನೇಕಾರರಿಗೆ ಎಷ್ಟು ತೊಂದರೆಯಾಗುತ್ತದೆ ಎನ್ನುವುದನ್ನು ತಾವು ಆಲೋಚನೆ ಮಾಡಿ ನೋಡಿ. ಆದುದ ರಿಂದ ಈ ಶುಕ್ರವಾರದಿಂದ ಈ ಒಂದು ಸಮಸ್ಯೆ ಬಹಳ ಉಲ್ಬಣಗೊಂಡಿದೆ. ತಾವು ಇದಕ್ಕೆ ಪೂರ್ಣವಾದಲ್ಲಿ ಈ ರೀತಿ ತೊಂದರೆಯಾಗಿದೆ ಎಂದು ಕಾರಣ ಕೊಡಬಹುದು. ಈ ರೀತಿಯಾಗಿ ಪವರ್‌ಕಟ್ ಆದರೆ ದೊಡ್ಡ ಬಳ್ಳಾಪುರದಲ್ಲಿರುವ ಸುಮಾರು 15 ಸಾವಿರ ನೇಕಾರರಿಗೆ ಒಂದು ದಿವಸಕ್ಕೆ 5ರೂಪಾಯಿ ಕೂಡ ಸಂಪಾದನೆಯಾಗುವುದಿಲ್ಲ. ಇದರಿಂದ ಅಲ್ಲಿ ನಿರುದ್ಯೋಗ ಸಮಸ್ಯೆ ಉಂಟಾಗಿದೆ. ಅವರಿಗೆ ಆ ದಿವಸ 9-9 1/2 ಗಂಟೆಗೆ ಏನು ಪವರ್ ಬರಬೇಕಾಗಿತ್ತೋ ಆವೊತ್ತಿನ ದಿವಸ 10 1/2-11 ಗಂಟೆಯಾದರೂ ಬರಲಿಲ್ಲ. ಈ ಒಂದು ಅನಿಶ್ಚಿತ ಪರಿಸ್ಥಿತಿಯಲ್ಲಿ ಆ ನೇಕಾರರು ಇದ್ದ ಪರಿಣಾಮವಾಗಿ ಅವರೇ ತಾವೇ ಒಂದು ಮೆರವಣಿಗೆಯನ್ನು ತೆಗೆದುಕೊಂಡು ಹೋದರು. ಇದು ಪೂರ್ವಯೋಜಿತವಾದದ್ದು ಎಂದು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.— ಇದಕ್ಕೆ ಸೀಮಿತವಾಗಿ ಮಾತನಾಡಿ ಆಮೇಲೆ ಕ್ಲಾರಿಫೀಕೇಷನ್ ಕೇಳಿ.

ಶ್ರೀ ಎಂ. ವೀರಪ್ಪ ಮೋಯ್ಲಿ.— ಆಗಬಹುದು. ಇದು ಪೂರ್ವಯೋಜಿತವಾದುದಲ್ಲ. ಕಾದು ನೋಡಬೇಕಾಗಿತ್ತು. ಪತ್ರಿಕೆಯಲ್ಲಿ ಬಂದ ಹಾಗೆ ಈ ಒಂದು ಮೆರವಣಿಗೆ ಪ್ರಾರಂಭವಾದುದ್ದು 3 ಗಂಟೆಗೆ, ಆಗ ಕಡಿಮೆ ಜನ ಇದ್ದರು. ಆಮೇಲೆ ಬರಬರುತ್ತಾ ಜನ ಜಾಸ್ತಿ ಆಯಿತು. ಹೇಗೆಂದರೆ, ಈ ದೊಡ್ಡ ಬಳ್ಳಾಪುರ ಎನ್ನುವುದು ಒಂದು ಕೇಂದ್ರೀಕೃತವಾದ ಪ್ರದೇಶವಾಗಿರುವುದರಿಂದ ಈ ಮೆರ ವಣಿಗೆ ಪ್ರಾರಂಭವಾದ ಮೇಲೆ ಜನ ಸೇರಿದ್ದರಿಂದ ಆ ಜನರ ಮನಸ್ಸಿನಲ್ಲಿ ಕ್ರೋಧ ಮತ್ತು ಕೆಚ್ಚು ಬಂದಿದೆ. ಅಲ್ಲಿಗೆ ಸುತ್ತಮುತ್ತ ಗ್ರಾಮಾಂತರ ಪ್ರದೇಶದ ಜನರೂ ಸಹ ಆಮೆಲೆ ಬಂದಿರಬೇಕು.

ಇವೊತ್ತು ಮಾನ್ಯ ಜಾಲಪ್ಪನವರು ಮಂತ್ರಿಗಳಾಗಿರಬಹುದು. ಆದರೆ ಇದು ಸರ್ಕಾರದ ಮೇಲೆ ಸಾಂಕೇತಿಕವಾಗಿ ಜನರ ರೋಷ ಎದ್ದು ಬಿಟ್ಟಿದೆ. ಇದಕ್ಕೆ ದೊಡ್ಡ ಬಳ್ಳಾಪುರದ ನೇಕಾರರು ಈ ಒಂದು ಪ್ರದರ್ಶನ ಮಾಡಿದ್ದಾರೆ. ಇಡೀ ಕರ್ನಾಟಕದ ಜನತೆ ಇದರ ಬಗ್ಗೆ ತಮ್ಮ ಕಣ್ಣು ತೆರೆಯಬೇಕು, ಸರ್ಕಾರದ ಕಣ್ಣು ತೆರೆಯಬೇಕು ಎಂದು ಈ ಘಟನೆಯಾಗಿದೆ. ಈ ರೀತಿ ಕೆ.ಇ.ಬಿ.ಯವರ ಕಾರ್ಯ ನಿರ್ವಹಣೆಯಿಂದ ಪರಿಸ್ಥಿತಿ ಉದ್ಭವಿಸಿದೆ. ಉದ್ಯಮ ಮತ್ತು ಕೃಷಿ ಕ್ಷೇತ್ರದಲ್ಲಿ ಸರ್ಕಾರ ಸಂಪೂರ್ಣವಾಗಿ

ನಿಷ್ಕ್ರಿಯತೆಯಿಂದಿರತಕ್ಕ ಒಂದು ಪರಿಸ್ಥಿತಿ ರಾಜ್ಯದಲ್ಲಿ ಬಂದಿದೆ. ಆದ್ದರಿಂದಲೇ ದೊಡ್ಡ ಬಳ್ಳಾಪುರದಲ್ಲಿ ಕುಪಿತ ನೇಕಾರರು ಈ ಕೆಲಸ ಮಾಡಿದ್ದಾರೆ. ಈ ಕೆಲಸ ಮಾಡುವುದಕ್ಕೆ ಹಿಂದೆ ಕೈವಾಡವಿದೆ, ಇದು ಪೂರ್ವಯೋಜಿತವಿದೆ, ಕಾಂಗ್ರೆಸ್(ಐ)ನವರು ಮಾಡಿಸಿದ್ದಾರೆಂದು ಮಾನ್ಯ ಮಂತ್ರಿಗಳು ಹೇಳಿರುವುದರಿಂದ ನೇಕಾರರಲ್ಲಿ ಬಂದಂಥ ದ್ವೇಷ ಇದಾಗಿದೆ. ಮಾನ್ಯ ಮಂತ್ರಿಗಳು ರೋಡ್ ಷೆಡ್ಡಿಂಗ್ 6 ಗಂಟೆಗೆ ಆಗುತ್ತದೆಯೋ ಅಥವಾ ಯಾವಾಗ ಆಗುತ್ತದೆಯೋ ನನಗೆ ಗೊತ್ತಿರಲಿಲ್ಲ. ಗೊತ್ತಿದ್ದರೆ ಅದನ್ನು ಸರಿ ಮಾಡುತ್ತಿದ್ದೆ ಎಂದು ಹೇಳಿದ್ದಾರೆ. ಇವರು ದೊಡ್ಡ ಬಳ್ಳಾಪುರಕ್ಕೆ ಆಗಿಂದಾಗ್ಗೆ ಹೋಗುತ್ತಿರುವಾಗ ಈ ವಿಷಯ ನನಗೆ ಗೊತ್ತಿಲ್ಲ ಎಂದು ಹೇಳುವುದು ಅಷ್ಟು ಸರಿಯಾದುದಲ್ಲ. ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಸುಮಾರು 40 ಸಾವಿರ ಜನ ನೇಕಾರರ ಜೀವನ್ಮರಣದ ಪ್ರಶ್ನೆ ಆ ಪ್ರದೇಶದಲ್ಲಿರುವಾಗ ಇದಕ್ಕೂ ಕೂಡಾ ರಾಜಕೀಯ ಬಣ್ಣ ಹೊದಲಿಕೆ ಕೊಡುವುದು ಸರಿಯಾದುದಲ್ಲ. ಅವರ ಸಮಸ್ಯೆಯನ್ನು ಪರಿಹಾರ ಮಾಡಲಿಕ್ಕೆ ಅನುಕಂಪನ ದೃಷ್ಟಿಯಿಂದ ಸರ್ಕಾರದ ಸಚಿವರು ಇದನ್ನು ನೋಡಿಬೇಕಾಗಿತ್ತೇ ಹೊರತು, ಅದಕ್ಕೆ ಬಣ್ಣ ಕೊಟ್ಟುಕೊಂಡು ಈ ಘಟನೆ ಪೂರ್ವ ನಿಯೋಜಿತವೆಂದು ಹೇಳತಕ್ಕದ್ದು ಸರಿಯಲ್ಲ. Attack was made on public property and thereafter they attacked private property. ಆದ್ದರಿಂದ ಇದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು, ಇದು ದೊಡ್ಡ ಬಳ್ಳಾಪುರದ ಪ್ರಶ್ನೆಯಲ್ಲ ಇಡೀ ಕರ್ನಾಟಕದ ಗ್ರಾಮಾಂತರ ಜನರ ಸಮಸ್ಯೆಯಾಗಿದೆಯೆಂದು ತಿಳಿದುಕೊಳ್ಳಬೇಕು. ಈ ಬಗ್ಗೆ ಒಂದು ವೈಟ್ ಪೇಪರನ್ನಾದರೂ ಸಭೆಯ ಮುಂದೆ ಇಡಿ, ಅದರ ಬಗ್ಗೆ ಚರ್ಚೆ ಮಾಡೋಣ ಎಂದು ನಾನು ಆಗಲೇ ಹೇಳಿದ್ದೇನೆ. ಜನಗಳಿಗೆ ಏನಾದರೂ ತೊಂದರೆ ಇದ್ದರೆ ಅದನ್ನು ನಿವಾರಣೆ ಮಾಡಲಿಕ್ಕೆ, ಸುಧಾರಣೆ ಮಾಡಲಿಕ್ಕೆ ಒಂದು ಸರಿಯಾದಂಥ ಕ್ರಮವನ್ನು ಮಾಡಬೇಕು. ಇಂಥ ಪರಿಸ್ಥಿತಿಯಿದಾಗಿ ದೊಡ್ಡ ಬಳ್ಳಾಪುರದಲ್ಲಿ ದುರದೃಷ್ಟಕರವಾದ ಪ್ರಸಂಗ ನಡೆದಿದೆ. ಈ ಬಗ್ಗೆ ಸರ್ಕಾರ ಏನು ಹೇಳುತ್ತದೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಬಿ. ಎಸ್. ಯಡಿಯೂರಪ್ಪ.— ಸನ್ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ವಿಷಯದ ಬಗ್ಗೆ ಇನ್ನೂ ಕೆಲವಾರು ಹೊಸ ವಿಷಯಗಳನ್ನು ಹೇಳಬೇಕಾಗಿದೆ. ನನಗೂ ಕೂಡಾ ಸಮಯವನ್ನು ಕೊಡಬೇಕು.

ಅಧ್ಯಕ್ಷರು.— ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಆಗಲೇ ಹೇಳಿಕೆ ಕೊಡಲು ಕರೆದಿದ್ದೇನೆ. ಅವರು ಹೇಳಿಕೆ ಕೊಟ್ಟ ಮೇಲೆ ತಾವು ವಿವರಣೆಗಳೇನಾದರೂ ಇದ್ದಲ್ಲಿ ಕೇಳಬಹುದು.

ಶ್ರೀ ಬಿ.ಎಸ್. ಯಡಿಯೂರಪ್ಪ.— ನಾನು ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ.

ಅಧ್ಯಕ್ಷರು.— ನಾನು ಈ ಸದನದಲ್ಲಿ ರೂಲ್ 334ರ ಬಗ್ಗೆ ಪದೇ ಪದೇ ಮಾನ್ಯ ಸದಸ್ಯರ ಗಮನಕ್ಕೆ ಅದರ ಇತಿಮಿತಿ ತರಬೇಕಾಗಿದೆ. ವಿಷಯವನ್ನು ಯಾರೇ ಎತ್ತಿದರೂ ವಿಷಯದ ಗಂಭೀರತೆ ಗಮನಿಸಿ, ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಮೇಲೆ, ವಿವರಣೆಯನ್ನು ಕೇಳುವುದಕ್ಕೆ ಮಾನ್ಯ ಸದಸ್ಯರುಗಳಿಗೆ ಅವಕಾಶ ಕೊಡುತ್ತೇನೆಂದು ನಾನು ಆಗಲೇ ಹೇಳಿದ್ದೇನೆ. ಇಂದು ರೂಲ್ 334ರ ಕೆಳಗೆ ಸುಮಾರು 20 ಸೂಚನೆಗಳು ಬಂದಿವೆ, ಅವನ್ನು ಹೇಗೆ ಮಾಡಬೇಕು?
ಇದರ ಬಗ್ಗೆ ನಾವು ವಿಚಾರ ಮಾಡಬೇಕಾಗಿದೆ. ಸಭಾನಾಯಕರು ಹೇಳಿಕೆ ಕೊಟ್ಟ ಮೇಲೆ ತಮಗೆ ಏನಾದರೂ ಅನುಮಾನವಿದ್ದರೆ ಅದನ್ನು ಪರಿಹರಿಸಿಕೊಳ್ಳುವುದಕ್ಕೆ ಅವಕಾಶ ಕೊಡುತ್ತೇನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.— ಈ ಪದ್ಧತಿ ಸರಿಯಲ್ಲ. ಅಧ್ಯಕ್ಷರು ಇಂಥ ವಿಷಯದ ಮೇಲೆ ಈ ರೀತಿಯ ತೀರ್ಮಾನ ಮಾಡಿದರೆ ಅದು ಸರಿಯಾಗಿ ಕಾಣಿಸುವುದಿಲ್ಲ.

Mr Speaker.— You cannot direct the Chair how to conduct. I perform on the basis of the rules before us.

ಶ್ರೀ ಎಸ್. ಬಂಗಾರಪ್ಪ.— ತಾವು ಈ ರೀತಿಯಾಗಿ ಅಧಿಕಾರವನ್ನು ಚಲಾವಣೆ ಮಾಡತಕ್ಕದ್ದು ಸರಿಯಲ್ಲ. ಇಂಥ ವಿಷಯದಲ್ಲಿ ತಾವು ಈ ರೀತಿಯಾಗಿ ತೀರ್ಮಾನ ಮಾಡಿದರೆ ಅದು ಸರಿಯಲ್ಲ. ಇಲ್ಲಿ ನಮ್ಮ ಹಕ್ಕನ್ನು ನಾವು ಚಲಾಯಿಸಬೇಕಾಗುತ್ತದೆ.

(ಗೊಂದಲ)

Sri S. Bangarappa.— We cannot accept this.

Mr. Speaker.— If the Member were to question the authority of the Chair in this manner I know how to conduct the House. This is not the way.

ಶ್ರೀ ಎಸ್. ಬಂಗಾರಪ್ಪ.— ನಾವು ವಿಷಯವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡದೆ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿಕೆ ಕೊಡಲು ಅವಕಾಶ ಕೊಡುವುದು ಸರಿಯೇ ?

ಅಧ್ಯಕ್ಷರು.— ಆಮೇಲೆ ತಾವು ವಿವರಣೆಯನ್ನು ಕೇಳಿ.

ಶ್ರೀ ಎಸ್. ಬಂಗಾರಪ್ಪ.— ತಾವು ಈ ರೀತಿಯಾಗಿ ಕಾರ್ಯಕಲಾಪಗಳನ್ನು ನಡೆಸುವುದಕ್ಕಾಗುವುದಿಲ್ಲ.

ಶ್ರೀ ಎಂ. ರಘುಪತಿ.— ತಾವು ಒಂದು ಸಾರಿ ತೀರ್ಪು ಕೊಟ್ಟಮೇಲೆ ನಿಯಮದ ಪ್ರಕಾರ ಸಭೆ ನಡೆಯಬೇಕು. ಮಾನ್ಯ ಬಂಗಾರಪ್ಪನವರು ತಾವು ನಿಯಮಗಳನ್ನು ಹೇಳಿದರೂ ಕೂಡ ಅವರು ಸಭಾ ನಿಂದನೆ ಮಾಡುವುದು ಸರಿಯೇ ? ಇದು ಸಭೆಗೆ ಅಗೌರವ ಮಾಡಿದಂತಾಗುತ್ತದೆ.

ಅಧ್ಯಕ್ಷರು. — ನಾನು ಈ ರೀತಿಯಾಗಿ ಸಭೆಯಲ್ಲಿ ಅನುಮತಿ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.— ಇದು ಸದಸ್ಯರುಗಳ ಹಕ್ಕು.

ಶ್ರೀ ಎಂ. ರಘುಪತಿ.— ಅವರನ್ನು ಆಚೆಗೆ ಕಳುಹಿಸಬೇಕು ಎಂದು ನಾನು ಹೇಳುತ್ತೇನೆ, ಯಾರೂ ಸದನಕ್ಕಿಂತ ದೊಡ್ಡವರಲ್ಲ.

ಶ್ರೀ ಕೆ.ಎಚ್. ರಂಗನಾಥ್.— ಸದಸ್ಯರುಗಳನ್ನು ಆಚೆಗೆ ಕಳುಹಿಸುವುದು ಕಷ್ಟವೇ ? ಇದು ಬಹಳ ಸುಲಭ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.— ನಾವು ಸಹ ರೂಲ್ 334ರ ಪ್ರಕಾರ ನೋಟೀಸನ್ನು ಕೊಟ್ಟಾಗ ನಮಗೂ ಒಂದೆರಡು ನಿಮಿಷ ಅವಕಾಶವನ್ನು ಕೊಟ್ಟರೆ ನಮ್ಮ ಅಭಿಪ್ರಾಯಗಳನ್ನು ಅಳವಡಿಸಿಕೊಂಡು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುವುದಕ್ಕೆ ಅನುಕೂಲವಾಗುವುದಿಲ್ಲವೇ ?

ಅಧ್ಯಕ್ಷರು.— ರೂಲ್ 334ರ ಪ್ರಕಾರ ಒಂದು ವಿಚಾರದ ಮೇಲೆ ಎಷ್ಟು ಜನ ಸದಸ್ಯರು ನೋಟೀಸ್ ಕೊಳುಹಿಸಿದ್ದಾರೋ ಅವರೆಲ್ಲರೂ ಇಲ್ಲಿ ಪ್ರಸ್ತಾಪ ಮಾಡಬೇಕಾದ್ದು ಇಲ್ಲ. ನಾನು ಇಲ್ಲಿ ಸದಸ್ಯರ ಗಮನಕ್ಕೆ ತರುವುದೇನೆಂದರೆ, ವಿಷಯದ ಗಂಭೀರತೆ ಇರುವುದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಟ್ಟಮೇಲೆ ತಮಗೆ ಅನುಮಾನಗಳು ಇದ್ದರೆ ಅದಕ್ಕೆ ವಿವರಣೆ ಕೇಳುವುದಕ್ಕೆ ಅವಕಾಶವನ್ನು ಕೊಡುತ್ತೇನೆ. ಇಲ್ಲಿ ಎಲ್ಲರೂ ಮಾತನಾಡಬೇಕಾದ ಅವಶ್ಯಕತೆ ಇಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ.— ತಾವು ಸಮಯವನ್ನು ನಿಗಧಿ ಮಾಡಿ ಅವಕಾಶ ಕೊಡಿ.

ಡಾ. ವಿ.ಎಸ್. ಆಚಾರ್ಯ.— ಹೆಚ್ಚಾಗಿ ಸದಸ್ಯರು ಈ ಪ್ರಶ್ನೆಯನ್ನು ಎತ್ತಿರುವುದರಿಂದ ತಾವು ಮೊದಲು ವಿರೋಧ ಪಕ್ಷದ ನಾಯಕರಿಗೆ ಅವಕಾಶ ಕೊಟ್ಟು ಬೇರೆ ಬೇರೆ ಪಕ್ಷದ ನಾಯಕರುಗಳಿಗೂ ಸಹ ಕೊನೆಯಪಕ್ಷ ಒಂದು ನಿಮಿಷ ಅವಕಾಶ ಕೊಡುವುದು ಒಳ್ಳೆಯದು. ಮಾನ್ಯ ವಿರೋಧ ಪಕ್ಷದ ನಾಯಕರು ಒಬ್ಬರು ಪ್ರಸ್ತಾಪ ಮಾಡಿದ ಮೇಲೆ ಉಳಿದವರಿಗೆ ಇಲ್ಲಿ ಆಸ್ಪದ ಇಲ್ಲ ಎಂದು ಹೇಳುವುದು ಬೇಡ.

ಅಧ್ಯಕ್ಷರು. — ನಿಯಮ 334ರ ಕೆಳಗೆ ಕ್ಲಾರಿಫಿಕೇಷನ್ ಕೇಳುವುದಕ್ಕೆ ಅವಕಾಶ ಇಲ್ಲ. ಆದರೂ ಕೂಡ ಇದು ವಿಶೇಷ ವಿಷಯವಾದ್ದರಿಂದ ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆ ಕೊಟ್ಟಮೇಲೆ ಏನಾದರೂ ಅನುಮಾನಗಳು ಇದ್ದರೆ ವಿವರಣೆ ಕೇಳುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಮೊದಲೇ ಹೇಳಬೇಕೆಂದರೆ ಹೇಗೆ? ಅದಕೋಸ್ಕರವೇ ವಾದ ಮಾಡುತ್ತೇವೆಂದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಸರ್ಕಾರದವರು ಉತ್ತರ ಕೊಡಲಿ; ಅನುಮಾನ ಇದ್ದರೆ ಪರಿಹರಿಸಿಕೊಳ್ಳಿ.

ಡಾ. ವಿ.ಎಸ್. ಆಚಾರ್ಯ.— ಮಾನ್ಯ ಸದಸ್ಯರಾದ ಯಡಿಯೂರಪ್ಪನವರು ಹೊಸ ವಿಷಯಗಳನ್ನು ಹೇಳುವುದಕ್ಕೆ ನಿಂತಿದ್ದಾರೆಂದು ಕಾಣುತ್ತದೆ.

ಅಧ್ಯಕ್ಷರು.— 334ರ ನಿಯಮದ ಪ್ರಕಾರ ಸೂಚನೆ ಕಳುಹಿಸಿದವರೆಲ್ಲರೂ ಮಾತನಾಡುವುದಕ್ಕೆ ಅವಕಾಶ ಇಲ್ಲ. ನಿಯಮದ ವ್ಯಾಪ್ತಿಯಲ್ಲಿ ಇದು ವಿಶೇಷ ವಿಷಯವಾಗಿರುವುದರಿಂದ ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆ ಕೊಟ್ಟಮೇಲೆ ವಿವರಣೆ ಕೇಳುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಸ್ವಾಮಿ, ನಾವುಗಳು ಹೊಸ ಸದಸ್ಯರಾಗಿದ್ದೇವೆ. ಸಾಕಷ್ಟು ವಿಷಯಗಳನ್ನು ಕಲಿಯತಕ್ಕ ಸಂದರ್ಭದಲ್ಲಿ ಹೊಸ ಸದಸ್ಯರುಗಳಿಗೆ ಅವಕಾಶ ಸಿಗದೆ ಹತ್ತಾರು ವರ್ಷಗಳಿಂದಲೂ ಸದಸ್ಯರಾಗಿರುವವರೇ ಕಾನೂನು ಚೌಕಟ್ಟು ಬಿಟ್ಟು ಮಾತನಾಡುವುದಕ್ಕೆ ಅವಕಾಶ ಮಾಡುತ್ತೀರಿ, ನಾವು ಮಾತನಾಡುವುದಕ್ಕೆ ಹೋದರೆ ಮೊಟಕುಗೊಳಿಸುತ್ತೀರಿ.

ಅಧ್ಯಕ್ಷರು.— ಮೊಟಕುಗೊಳಿಸಬೇಕೆಂಬ ಉದ್ದೇಶ ಇಲ್ಲ. ಸಭಾನಾಯಕರು ಹೇಳಿಕೆ ಕೊಡುವಂಥಾದ್ದು ಪ್ರಿಯಾರಿಟಿ ಬರುತ್ತದೆ. If the leader wants to make a statement suo motu, he gets priority over it.

ಶ್ರೀ ಎಸ್. ಬಂಗಾರಪ್ಪ.— ಅಧ್ಯಕ್ಷರ ಅಧಿಕಾರ ವ್ಯಾಪ್ತಿಯನ್ನು ನಾವು ಪ್ರಶ್ನೆ ಮಾಡುತ್ತಿಲ್ಲ. 334ರ ನಿಯಮ ಇರಬಹುದು; ಬೇರೆ ಯಾವುದೇ ನಿಯಮ ಇರಬಹುದು; ಅದರ ಕೆಳಗೆ ವಿರೋಧ ಪಕ್ಷದ ನಾಯಕರು ಎತ್ತಿರಬಹುದು; ಬೇರೆ ಸದಸ್ಯರು ಎತ್ತಿರಬಹುದು. ಸದಸ್ಯರುಗಳು ಸಭಾ ನಾಯಕರಾಗಲಿ; ಬೇರೆ ಸಚಿವರಾಗಲೀ ಹೇಳಿಕೆ ಕೊಡುವುದಕ್ಕೆ ಮುಂಚೆ ಅವರ ಹತ್ತಿರ ಇರತಕ್ಕ ವಿಷಯಗಳನ್ನು ಪ್ರಸ್ತಾಪ ಮಾಡಿದರೆ; ಅವರು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ಬರೀ ವಿವರಣೆ ಕೇಳು

ವಂತಾದ್ದು ಸರಿಯಾದಂಥ ದಾರಿಯಲ್ಲ. ನಿನ್ನೆ ಆಥವಾ ಮೊನ್ನೆ ನಮ್ಮ ಪಕ್ಷದವರು 334ರ ನಿಯಮಕ್ಕೆ ಸಂಬಂಧಪಟ್ಟಂತೆ 6 ಜನ ಸಹಿ ಮಾಡಿದ್ದರೂ ಒಬ್ಬರು ಪ್ರಸ್ತಾಪ ಮಾಡಿದ್ದಾರೆ. ಸಭಾ ಕಾಲವನ್ನು ಉಳಿಸುವುದರಲ್ಲಿ; ತಮ್ಮ ತೊಂದರೆಯನ್ನು ಅರಿತುಕೊಂಡು ನಾವು ಕೆಲಸ ಮಾಡುತ್ತಿದ್ದೇವೆ. ಮಾನ್ಯ ಆಚಾರ್ಯರವರು ಹೇಳಿದಂತೆ ಒಂದೊಂದು ಪಕ್ಷದ ಮುಖಂಡರುಗಳಿಗೆ ಒಂದೆರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಸಾಕು. ವಿವರಣೆ ಕೇಳುವುದರಲ್ಲಿ ಹೆಚ್ಚಿನ ಸ್ಕೋಪ್‌ಗೆ ಅವಕಾಶ ಇಲ್ಲ.

ಅಧ್ಯಕ್ಷರು.— ಈ ಒಂದು ಕೆಲಸ ಮಾಡೋಣ. ಮೊದಲು ಮೊಯ್ಲಿಯವರು ಕೇಳಿದ್ದಕ್ಕೆ ಮುಖ್ಯ ಮಂತ್ರಿಯವರು ಉತ್ತರ ಕೊಡಲಿ. ಆಮೇಲೆ ನಿಮ್ಮ ವಿಚಾರವನ್ನು ತೆಗೆದುಕೊಳ್ಳೋಣ. Let the Chief Minister make a statement on that. Then, I will call you again. I will go by the list. The first name is Sri M. Veerappa Moily. for that Chief Minister is replying. Then, I will call your name.

ಶ್ರೀ ಎಸ್. ಬಂಗಾರಪ್ಪ.— ಪ್ರತ್ಯೇಕವಾಗಿ ಕರೆಯುತ್ತೀರಾ ?

ಅಧ್ಯಕ್ಷರು. — ಒಂದು ತೀರ್ಮಾನಕ್ಕೆ ಬರಲೇ ಬೇಕಲ್ಲ. ಲಿಸ್ಟ್ ಪ್ರಕಾರ ಹೋಗೋಣ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).— ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ದೊಡ್ಡ ಬಳ್ಳಾಪುರದಲ್ಲಿ ನಡೆದಂಥ ಘಟನೆಗೆ ಸಂಬಂಧಪಟ್ಟಂತೆ ಈ ಮುಂದಿನ ಹೇಳಿಕೆಯನ್ನು ಸದನದ ಮುಂದಿಡುವುದಕ್ಕೆ ಅಪೇಕ್ಷೆ ಪಡುತ್ತೇನೆ.

ದೊಡ್ಡಾ ಬಳ್ಳಾಪುರ ವಿದ್ಯುಚ್ಛಾಲಿತ ಮಗ್ಗಗಳ ಕೇಂದ್ರ ಕಳೆದ ಒಂದು ವಾರದಿಂದ ಈ ಮಗ್ಗಗಳಿಗೆ ವಿದ್ಯುತ್ ಸರಬರಾಜಿನಲ್ಲಿ ಆಗಾಗ್ಗೆ ತಡೆಯುಂಟಾಗುತ್ತಿತ್ತು. ವಿದ್ಯುತ್ ಉತ್ಪತ್ತಿ ಹಾಗೂ ಸರಬರಾಜು ಕೇಂದ್ರಗಳಲ್ಲಿನ ಯಾಂತ್ರಿಕ ವೈಫಲ್ಯವೇ ಇದಕ್ಕೆ ಕಾರಣ. ಈ ರೀತಿಯ ಅಪೂರ್ಣ ಹಾಗೂ ಅನಿಶ್ಚಿತ ಸರಬರಾಜಿನಿಂದ ಮಗ್ಗಗಳ ಕಾರ್ಮಿಕರ ಗಳಿಕೆಯ ಮೊತ್ತ ಗಮನಾರ್ಹವಾಗಿ ಇಳಿಮುಖವಾಗಿತ್ತು. ಕಡಿಮೆಯಾಗುತ್ತಿರುವ ವೇತನವನ್ನು ನೋಡಿ ಕಾರ್ಮಿಕರು ಹಾಗೂ ಅವರ ಕುಟುಂಬದವರಲ್ಲಿ ಅಸಮಾಧಾನ ಹಾಗೂ ಅತೃಪ್ತಿ ಉಂಟಾಗಿತ್ತು.

2. **31-1-84** ರಂದು ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಪೀಣ್ಯದಲ್ಲಿನ ವಿದ್ಯುತ್ ಸರಬರಾಜು ಕೇಂದ್ರದಲ್ಲಿನ 'ಸರ್‌ಕ್ಯೂಟ್ ಬ್ರೇಕರ್' ಕೆಟ್ಟು ಹೋದ್ದರಿಂದ ದೊಡ್ಡ ಬಳ್ಳಾಪುರದಲ್ಲಿ ಪುನಃ ವಿದ್ಯುತ್ ಕೊರತೆ ಉಂಟಾಯಿತು. ಮಗ್ಗಗಳು ಸ್ಥಗಿತಗೊಂಡವು. ಇದರಿಂದ ಕೆಲಸಕ್ಕಿಲ್ಲದೆ ಕುಳಿತಿಗೊಂಡ 400-500 ಕಾರ್ಮಿಕರು ದೊಡ್ಡ ಬಳ್ಳಾಪುರದ ವಿದ್ಯುನ್ಮಂಡಲಿ ಕಛೇರಿಗೆ ಹೋಗಿ ಅಲ್ಲಿಯ ಅಧಿಕಾರಿಗಳನ್ನು ವಿದ್ಯುತ್ ಕೊರತೆಯ ಬಗ್ಗೆ ಪ್ರಶ್ನಿಸಿದರು. ಅಧಿಕಾರಿಗಳು ಕೊಟ್ಟ ಉತ್ತರದಿಂದ ಅವರಿಗೆ ಸಮಾಧಾನವಾಗಲಿಲ್ಲ. ಇಷ್ಟು ಹೊತ್ತಿಗೆ ಹೆಚ್ಚಿನ ಸಂಖ್ಯೆಯಲ್ಲಿ ಗುಂಪು ಸೇರಿತು. ಸುಮಾರು 1000ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜನರ ಗುಂಪು 'ಡಿ' ಕ್ವಾರ್ಟರ್ಸ್‌ನತ್ತ ಧಾವಿಸಿ ಅಲ್ಲಿದ್ದ ಶ್ರೀ ರಾಜೇಂದ್ರ ಅವರ ವೈನ್ ಷಾಪ್ ಮತ್ತು ಇತರ ಅಂಗಡಿಗಳ ಮೇಲೆ ಹಲ್ಲೆ ಮಾಡಿತು. ಜನರ ಇನ್ನೊಂದು ಗುಂಪು ಚಲಿಸುತ್ತಿದ್ದ ಬಸ್ಸುಗಳ ಮೇಲೆ ಕಲ್ಲುಗಳನ್ನು ಎಸೆಯುತ್ತಾ 'ಡಿ' ಕ್ವಾರ್ಟರ್ಸ್ ಬಳಿ ಬಂದಿತು. ಮತ್ತೊಂದು ರಾಜಕಮಲ್ ಥಿಯೇಟರ್ ಬಳಿ ಹೋಗಿ ಹಲ್ಲೆ ಮಾಡಲು ಯತ್ನಿಸಿದಾಗ ಪೋಲೀಸರು ಅದನ್ನು ತಡೆಗಟ್ಟಿದರು. ಗುಂಪಿನ ಹಿಂದೆ ಇದ್ದ ಸಬ್‌ಇನ್ಸ್‌ಪೆಕ್ಟರ್‌ರವರ ಬುದ್ಧಿವಾದವನ್ನು ಗುಂಪು ಅಲಕ್ಷಿಸಿ ಭಾರತ್ ಆಟೋ ಮೊಬೈಲ್ ಷಾಪ್ ಮತ್ತು ಇತರ ಅಂಗಡಿಗಳ ಮೇಲೆ ಹಲ್ಲೆ ಮಾಡಲು ಯತ್ನಿಸಿದಾಗ ಸ್ಥಳದಲ್ಲೇ ಇದ್ದ ಪೋಲೀಸ್ ಇನ್ಸ್‌ಪೆಕ್ಟರು ಮತ್ತು ಅವರ ಸಿಬ್ಬಂದಿ ಲಾಠೀ ಭಾರ್ಜ ಮಾಡಿದರು. ಆದರಿಂದ ಸಾಕಷ್ಟು ಪರಿಣಾಮವಾಗದ ಕಾರಣ ಇನ್ಸ್‌ಪೆಕ್ಟರು ಗಾಳಿಯಲ್ಲಿ ಆರು ಸುತ್ತು ಗುಂಡು ಹಾರಿಸಿದರು. ಗುಂಡು ಹಾರಿಸಿದ ಮೇಲೆ ಗುಂಪು ಚದುರಿತು. ಈ ಪ್ರಕರಣದಲ್ಲಿ 9 ಜನ ಪೋಲೀಸರಿಗೆ ಕಲ್ಲಿನೇಟು ಬಿತ್ತು. ಚದುರುತ್ತಿದ್ದ ಗುಂಪು ಸಾರಾಯಿ ಅಂಗಡಿಗೆ ನುಗ್ಗಿ ಅಲ್ಲಿದ್ದ ಪೀಠೋಪಕರಣಗಳಿಗೆ ಬೆಂಕಿ ಹಚ್ಚಿತು. ಮತ್ತೊಂದು ಗುಂಪು ಹಾಲಿನ ಶೈತ್ಯೀಕರಣ ಕೇಂದ್ರಕ್ಕೆ ನುಗ್ಗಿ ಕಲ್ಲೆಸೆದು ಗಾಜುಗಳನ್ನು ಒಡೆದು 250 ಲೀಟರ್‌ಗಳಷ್ಟು ಹಾಲನ್ನು ನೆಲಕ್ಕೆ ಚೆಲ್ಲಿದರು. ತೋಟಗಾರಿಕೆ ಇಲಾಖೆಯ ತೋಟಕ್ಕೆ ನುಗ್ಗಿ ಅಲ್ಲಿನ ತರಕಾರಿ ಗಿಡಗಳನ್ನು ಕಿತ್ತುಹಾಕಿದರು. ಮತ್ತೊಂದು ಗುಂಪಿನ ಜನರು ಟಿ.ಎ.ಪಿ.ಸಿ.ಎಂ.ಎಸ್. ಕಛೇರಿಗೆ ನುಗ್ಗಿ ಅಲ್ಲಿಯ ಪೀಠೋಪಕರಣಗಳಿಗೆ ಬೆಂಕಿಹಚ್ಚಿ ಕಬ್ಬಿಣದ ಪೆಟ್ಟಿಗೆಯನ್ನು ಹೊರತಂದು ಅದರಲ್ಲಿದ್ದ 40,000 ರೂಪಾಯಿಗಳನ್ನು ಹೊತ್ತುಕೊಂಡು ಹೋದರು. ಹತ್ತಿರದಲ್ಲೇ ಇದ್ದ 'ಮೆಟಾಡಾರ್' ಗಾಡಿಗೆ ಬೆಂಕಿ ಹಚ್ಚಲಾಯಿತು. ಸ್ಥಳಕ್ಕೆ ಧಾವಿಸಿದ ಪೋಲೀಸ್ ಇನ್ಸ್‌ಪೆಕ್ಟರ್ ಮತ್ತೊಮ್ಮೆ 9 ಸುತ್ತು ಗುಂಡನ್ನು ಗಾಳಿಯಲ್ಲಿ ಹಾರಿಸಿದರು. ಇನ್ನೊಂದು ಗುಂಪು ಪಿ.ಎಲ್.ಡಿ. ಟ್ಯಾಂಕಿಗೆ ನುಗ್ಗಿ ಅಲ್ಲಿದ್ದ ಪೀಠೋಪಕರಣಗಳನ್ನು, ಟೈಪ್‌ರೈಟರ್ ಇತ್ಯಾದಿಗಳನ್ನು ನಾಶಮಾಡಿದರು. ಮತ್ತೊಂದು ಗುಂಪು ಬಸ್ ಸ್ಟ್ಯಾಂಡ್ ಬಳಿ ಹೋಗಿ ಧಾಳಿ ಮಾಡಲು ಯತ್ನಿಸಿದಾಗ ತಹಸೀಲ್ದಾರರು ಮತ್ತು ಇನ್ಸ್‌ಪೆಕ್ಟರ್‌ರವರು ಅಲ್ಲಿಗೆ ಹೋದರು. ಇನ್ಸ್‌ಪೆಕ್ಟರು ಮತ್ತೆ 3 ಸುತ್ತು ಗುಂಡನ್ನು ಗಾಳಿಯಲ್ಲಿ ಹಾರಿಸಿದರು. ಇಷ್ಟು ಹೊತ್ತಿಗೆ

ಸುಮಾರು ಮಧ್ಯಾಹ್ನ 1 ಗಂಟೆಯಾಗಿತ್ತು. ಸುದ್ದಿ ತಿಳಿದ ಕೂಡಲೇ ಡಿ. ಐ. ಜಿ.ಯವರು ಮತ್ತು ಎಸ್.ಪಿ.ಯವರು ದೊಡ್ಡಬಳ್ಳಾಪುರಕ್ಕೆ ಧಾವಿಸಿದರು. ಎರಡು ಕೆ.ಎಸ್.ಆರ್.ಪಿ. ಪ್ಲೆಟೂನುಗಳು ಮತ್ತು ಒಂದು ಡಿ.ಎ.ಆರ್. ವ್ಯಾನು ಕೂಡ ಅಲ್ಲಿಗೆ ಬಂದವು. ಪೋಲೀಸ್ ಗಸ್ತನ್ನು ಹೆಚ್ಚುಮಾಡಿ ಎಲ್ಲಾ ಸುರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ನಿನ್ನೆ ಸಂಜೆಯಿಂದ ಪರಿಸ್ಥಿತಿ ಶಾಂತವಾಗಿದೆ. ಸಹಕಾರಿ ಸಚಿವರು ಸ್ಥಳಕ್ಕೆ ಭೇಟಿ ಇತ್ತು ಪರಿಸ್ಥಿತಿಯನ್ನು ವೀಕ್ಷಿಸಿ ಸ್ಥಳೀಯರೊಡನೆ ಸಮಾಲೋಚಿಸಿದರು.

3. ಇದುವರೆಗೆ ಹತ್ತು ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆ. ಮೂವತ್ತೈದು ಜನರನ್ನು ಈಗಾಗಲೇ ದಸ್ತಗಿರಿ ಮಾಡಲಾಗಿದೆ. ಉಳಿದವರನ್ನು ದಸ್ತಗಿರಿ ಮಾಡಲಾಗುತ್ತಿದೆ. ಸಂಭವಿಸಿದ ನಷ್ಟವನ್ನು ಅಂದಾಜು ಮಾಡಲು ಮಹಜರ್ ಕ್ರಮ ನಡೆಯುತ್ತಿದೆ.

ಮಾನ್ಯ ಅಧ್ಯಕ್ಷರೇ, ದೊಡ್ಡಬಳ್ಳಾಪುರ ಶಹರದಲ್ಲಿ 4 ತಿಂಗಳುಗಳಿಂದ ಏನು ವಿದ್ಯುತ್ ಸರಬರಾಜಿನಲ್ಲಿ ಖೋತ ಆಗಿದೆ. ಅದೇ ರೀತಿ ಬೇರೆ ಎಲ್ಲಾ ಭಾಗಗಳಲ್ಲೂ ಆಗಿದೆ. ವಾರಕ್ಕೆ 6 ದಿವಸಗಳಲ್ಲಿ ಮೂರು ದಿವಸ ಬೆಳಿಗ್ಗೆ 6 ಗಂಟೆಯಿಂದ 9 ಗಂಟೆಯವರೆಗೂ ಮತ್ತು ಇನ್ನುಳಿದ ಮೂರು ದಿನಗಳಲ್ಲಿ ಮಧ್ಯಾಹ್ನ 12 ಗಂಟೆಯಿಂದ 3 ಗಂಟೆಯವರೆಗೂ ವಿದ್ಯುತ್ ಸರಬರಾಜನ್ನು ನಿಗದಿತಗೊಳಿಸಲಾಗಿತ್ತು. ಸುಮಾರು 2 ತಿಂಗಳ ಹಿಂದೆ ಅಲ್ಲಿಯ ನಾಗರಿಕರ ಪರವಾಗಿ ಒಂದು ಮನವಿ ಬಂತು. ಬೆಳಿಗ್ಗೆ 6 ಗಂಟೆಯಿಂದ 9 ಗಂಟೆಯವರೆಗೆ ವಿದ್ಯುತ್ ಸರಬರಾಜನ್ನು ನಿಲ್ಲಿಸುವುದರಿಂದ ಏನೂ ತೊಂದರೆಯಾಗುವುದಿಲ್ಲ, ಆದರೆ 12 ಗಂಟೆಯಿಂದ 3 ಗಂಟೆಯವರೆಗೆ ವಿದ್ಯುತ್ ಸರಬರಾಜು ನಿಲ್ಲಿಸಿರುವುದರಿಂದ ನಮಗೆ ತೊಂದರೆಯಾಗುತ್ತದೆ, ವಾರದ 6 ದಿವಸಗಳಲ್ಲಿಯೂ ಕೂಡ ಬೆಳಿಗ್ಗೆ 6 ಗಂಟೆಯಿಂದ 9 ಗಂಟೆಯವರೆಗೆ ವಿದ್ಯುತ್ ಕಡಿತವನ್ನು ಮಾಡಬಹುದು ಎನ್ನುತಕ್ಕಂಥ ಮನವಿ ಬಂತು ಆ ರೀತಿಯಾಗಿ ಮನವಿ ಬಂದಮೇಲೆ ಕಳೆದ 2 ತಿಂಗಳಿಂದ ಬೆಳಿಗ್ಗೆ 6 ಗಂಟೆಯಿಂದ 9 ಗಂಟೆಯವರೆಗೆ ವಿದ್ಯುತ್ ಸರಬರಾಜನ್ನು ನಿಲ್ಲಿಸಲಾಯಿತು. ಆದರೆ ದುರ್ದೈವದಿಂದ ಕಳೆದ 8-10 ದಿವಸಗಳಲ್ಲಿ ದೊಡ್ಡಬಳ್ಳಾಪುರ ಶಹರದಲ್ಲಿ ವಿದ್ಯುತ್ ಸರಬರಾಜು ಸರಿಯಾದ ರೀತಿಯಲ್ಲಿ ಆಗಲಿಲ್ಲ. ಅದಕ್ಕೆ ತಾಂತ್ರಿಕ ದೋಷವೇ ಮುಖ್ಯವಾದ ಕಾರಣವಾಗಿದೆ. ದಿವಸಕ್ಕೆ 8–10 ಸಲ ವಿದ್ಯುತ್ ಸರಬರಾಜು ನಿಂತುಹೋಗುತ್ತಿತ್ತು, ಮತ್ತೆ ನಿನ್ನೆ ದಿವಸ ಪೀಣ್ಯದಲ್ಲಿರತಕ್ಕ ನಮ್ಮ ಯಂತ್ರ ಕೆಟ್ಟು ಹೋದುದರಿಂದ ಬೆಳಿಗ್ಗೆಯಿಂದ ಸುಮಾರು ಗಂಟೆಗಳವರೆಗೆ ವಿದ್ಯುತ್ ಸರಬರಾಜು ನಿಂತು ಹೋಗಿತ್ತು ಇದರಿಂದ ಮಗ್ಗಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರು ಮತ್ತು ನೇಕಾರರು ಏನಿದ್ದಾರೆ ಅವರು ಅಸಮಾಧಾನಗೊಂಡು ಉದ್ರೇಕಗೊಂಡಿದ್ದರಿಂದ ಈ ಘಟನೆ ಸಂಭವಿಸಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಇದರ ಹಿಂದೆ ಒಂದು ಕೈವಾಡವಿದೆ, ಇದು ಪೂರ್ವ ನಿಯೋಜಿತವಾಗಿ ಆಗಿರತಕ್ಕ ಕೆಲಸವೆಂದು ಮಾನ್ಯ ಸಹಕಾರ ಸಚಿವರು ಹೇಳಿದ್ದಾರೆಂದು ಇವರು ಪ್ರಸ್ತಾಪ ಮಾಡಿ ಹೇಳಿದರು. ಇದರಲ್ಲಿ ಯಾರ ಕೈವಾಡ ಇದೆ ಅಥವಾ ಪೂರ್ವನಿಯೋಜಿತವಾದದ್ದೇ ಎಂದು ಹೇಳುವಂಥದ್ದನ್ನು ಪತ್ತೆ ಹಚ್ಚಬೇಕಾಗಿದೆ. ಇದರಲ್ಲಿ ಒಂದು ವಿಚಾರ ಮಾತ್ರ ಸ್ಪಷ್ಟವಾಗಿದೆ. ಇದಕ್ಕೆ ಮುಖ್ಯವಾಗಿ ಅಲ್ಲಿಯ ಜನರು ಉದ್ರೇಕಗೊಳ್ಳುವುದಕ್ಕೆ ಕಾರಣವಾಗಿರತಕ್ಕದ್ದು ಪುನಃ ಪುನಃ ವಿದ್ಯುಚ್ಛಕ್ತಿ ಸರಬರಾಜಿನಲ್ಲಿ ತೊಂದರೆಯಾಗಿರುವುದೇ ಕಾರಣವಾಗಿದೆ. ಕಳೆದ 8-10 ದಿವಸಗಳಿಂದ ಯಾವ ಕಾರಣಕ್ಕಾಗಿ ವಿದ್ಯುಚ್ಛಕ್ತಿ ಸರಬರಾಜಿಗೆ ತೊಂದರೆಯಾಯಿತು, ಅದು ಸಂಪೂರ್ಣವಾಗಿ ತಾಂತ್ರಿಕ ದೋಷದಿಂದಲೇ ಅಥವಾ ಇಲಾಖೆಯ ಅಧಿಕಾರಿಗಳ ಅಲಕ್ಷ್ಯದಿಂದಲೇ ಎಂದು ಹೇಳುವಂಥದ್ದನ್ನು ತನಿಖೆ ಮಾಡಿಸುತ್ತೇನೆ. ವಿದ್ಯುಚ್ಛಕ್ತಿ ಇಲಾಖೆಯ ಸಿಬ್ಬಂದಿಯವರಿಂದ ಏನಾದರೂ ಅಲಕ್ಷ್ಯ ಮನೋಭಾವನೆಯಿಂದ ಈ ರೀತಿಯಾಗಿ ತೊಂದರೆ ಉಂಟಾಗಿದ್ದರೆ ಅಂಥಾ ಅಧಿಕಾರಿಗಳ ಮೇಲೆ ಉಗ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ.— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ದೊಡ್ಡಬಳ್ಳಾಪುರ ಶಹರದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಸರಿಯಾಗಿ ಆಗದಿದ್ದರಿಂದ ಈ ಘಟನೆ ಆಗುವುದಕ್ಕೆ ಕಾರಣವಾಗಿದೆ. ಆದರೆ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಬರೀ ದೊಡ್ಡಬಳ್ಳಾಪುರದಲ್ಲಿ ಒಂದೇ ಅಲ್ಲ, ನಮ್ಮ ರಾಜ್ಯದ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿಯೂ ಈ ಒಂದು ತೊಂದರೆ ಇದೆ. ನಾನೂ ಸಹ 5 ಪಂಪುಸೆಟ್ಟುಗಳನ್ನು ಇಟ್ಟುಕೊಂಡಿದ್ದೇನೆ, ಅದರಲ್ಲಿ 3 ಸಬ್ ಮರ್ಸಿಬಲ್ ಪಂಪುಸೆಟ್ಟುಗಳಿವೆ. ಅಲ್ಲಿ ಏನಾದರೂ ಲೋಡು ಕಡಿಮೆ ಆಯಿತು ಎಂದರೆ ಮೋಟಾರ್ ಗಳು ಸುಟ್ಟು ಹೋಗತಕ್ಕ ಪ್ರಸಂಗಗಳು ಅನೇಕ ಇವೆ. 3 ಗಂಟೆಗಳ ಕಾಲ ಮಾತ್ರ ವಿದ್ಯುತ್ ಸರಬರಾಜು ಖೋತಾ ಮಾಡಿದ್ದೀವಿ ಎಂದು ಹೇಳಿದ್ದೀರಿ, ಆದರೆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಗಂಟೆಗಟ್ಟಲೆ ಕಾಲ ಇರುವುದಿಲ್ಲ ವಿದ್ಯುಚ್ಛಕ್ತಿ ವಂಡಳಿಯಲ್ಲಿ ಬಹಳ ಅಧಕ್ಷತೆ ಇದೆಯೆಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಶ್ರೀಮಾನ್ ಜಾಲಪ್ಪನವರು ಅಲ್ಲಿಗೆ ಹೋಗಿದ್ದಾರೆ, ಅಲ್ಲಿಗೆ ಹೋದ ಮೇಲೆ ನನ್ನ ಮೇಲೆ ದ್ವೇಷ ಇದೆ, ಆ ದ್ವೇಷದಿಂದ ಈ ರೀತಿ ಮಾಡಿದ್ದಾರೆ. ಇದರಲ್ಲಿ ಕೆಲವರ ಕೈವಾಡ ಇದೆಯೆಂದು ಹೇಳಿದ್ದಾರೆ. ಆದುದರಿಂದ ಇದರಲ್ಲಿ ಯಾರ ಕೈವಾಡ ಇದೆ ಎಂಬುದನ್ನು ಪೋಲೀಸಿನವರು ವಿಚಾರ ಮಾಡಲಿ. ಮಾನ್ಯ ಜಾಲಪ್ಪನವರು ಒಬ್ಬ ಸದಸ್ಯರಾಗಿ ಈ ಹೇಳಿಕೆ ಕೊಟ್ಟಿದ್ದರೆ ಸರಿ ಹೋಗು

ತ್ತಿತ್ತು. ಆದರೆ ಮಾನ್ಯ ಜಾಲಪ್ಪನವರು ಮಂತ್ರಿಮಂಡಲದ ಸದಸ್ಯರಾಗಿ ಅವರು ಈ ರೀತಿಯಾಗಿ ಕೈವಾಡ ಇದೆ, ಯಾರದೋ ಶಕ್ತಿ ಇದೆಯೆಂದು ಹೇಳಿರುವುದರಿಂದ ಪೋಲೀಸಿನವರು ತನಿಖೆ ಮಾಡುವುದಕ್ಕೆ ಕಷ್ಟವಾಗುತ್ತದೆ. ಅಲ್ಲಿ ವೈನ್‌ಷಾಪ್ ಮೇಲೆ ಹಲ್ಲೆಯಾಗಿದೆ, ಮತ್ತು ಟಿ. ಎ. ಪಿ. ಎನ್. ಪಿ.ಎಸ್. ಸೊಸೈಟಿ ಮೇಲೆ ಹಲ್ಲೆ ಮಾಡಿದ್ದಾರೆ, ಚಿಲ್ಲಿಂಗ್ ಸೆಂಟರ್ ಮೇಲೆ, ಹಾರ್ಟಿಕಲ್ಚರಲ್ ಡಿಪಾರ್ಟ್‌ಮೆಂಟಿನ ಮೇಲೆ, ಹಿಂಸೆ ಲೂಟಿ ಮಾಡಿದ್ದಾರೆ. ವೈನ್‌ಷಾಪ್ ರಾಜೇಂದ್ರ ಎನ್ನುವವರಿಗೆ ಸಂಬಂಧ ಪಟ್ಟಿದು , ಅವರಿಗೂ ಮಂತ್ರಿಯವರಿಗೂ ಏನು ಸಂಬಂಧವಿದೆ ? ಆದುದರಿಂದ ಇದರ ಬಗ್ಗೆ ಸಂಪೂರ್ಣವಾಗಿ ತನಿಖೆಯಾಗಬೇಕು ಆ ಊರಿನಲ್ಲಿ ನೇಕಾರರ ಸಹಕಾರ ಸಂಘ ಇದೆ, ಹ್ಯಾಂಡ್‌ಲೂಮ್ ವೀವರ್ಸ್ ಸೊಸೈಟಿ ಇದೆ, ಅಲ್ಲಿ ಅವರಿಗೆ ತೊಂದರೆಯಾಗಿರುವ ಬಗ್ಗೆ ಹಿಂದೆ ನಾನು ಬಜೆಟ್ ಮೇಲೆ ಮಾತನಾಡುವಾಗ ಸವಿಸ್ತಾರವಾಗಿ ತಿಳಿಸಿದ್ದೇನೆ, ಪುನಃ ಅದನ್ನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಆದ್ದರಿಂದ ಈ ಘಟನೆಯ ಹಿನ್ನಲೆಯಲ್ಲಿ ವಿದ್ಯುಚ್ಛಕ್ತಿ ಕೊರತೆ ಒಂದೇ ಅಲ್ಲ, ಇನ್ನಿತರ ವಿಷಯಗಳು ಅಡಕವಾಗಿವೆ. ಈಗ ಏನು ವಿದ್ಯುಚ್ಛಕ್ತಿ ತೊಂದರೆ ಉಂಟಾಗಿದೆ ಮತ್ತು ಇನ್ನಿತರ ತೊಂದರೆಗಳಿವೆ ಅವುಗಳನ್ನು ಸರಿಪಡಿಸಿ ಅಲ್ಲಿಯ ಪರಿಸ್ಥಿತಿ ಇನ್ನೂ ವಿಕೋಪಕ್ಕೆ ಹೋಗದ ಹಾಗೆ ನೋಡಿಕೊಳ್ಳಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಬಿ.ಎಸ್ ಯಡಿಯೂರಪ್ಪ — ಮಾನ್ಯ ಅಧ್ಯಕ್ಷರೇ, ದೊಡ್ಡಬಳ್ಳಾಪುರಕ್ಕೆ ನಾನು ಟೆಲಿಫೋನ್ ಸಂಪರ್ಕ ಮಾಡಿ ತಿಳಿದುಕೊಂಡ ಹಾಗೆ ಮಾನ್ಯ ಮುಖ್ಯಮಂತ್ರಿಗಳವರು ಏನು ಈಗ ವರದಿಯನ್ನು ಓದಿದರು, ಆದು ಸರಿಯಾದಂಥ ವರದಿಯೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಬಹಳ ಪ್ರಾಮುಖ್ಯವಾದ ಸಂಗತಿಯೆಂದರೆ, ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ ಹಾಗೆ ಈ ಒಂದು ವಾರದಿಂದ ಈ ರೀತಿ ವಿದ್ಯುಚ್ಛಕ್ತಿ ಕೊರತೆ ಇತ್ತು. ಆಲ್ಲಿರತಕ್ಕ ಕೆಲಸಗಾರರು ಇದರಿಂದ ಕೆಲಸವಿಲ್ಲದೆ ತೊಂದರೆಗೆ ಸಿಕ್ಕಿಹಾಕಿಕೊಂಡಿದ್ದರು, ಅವರಲ್ಲಿ ಅಸಮಾಧಾನವಿತ್ತು, ಆದುದರಿಂದ ಈ ಘಟನೆ ನಡೆದಿದೆ ಎನ್ನುವ ಮಾತನ್ನು ನಾನು ಬೆಳಿಗ್ಗೆ 9 ಗಂಟೆಗೆ ಫೋನ್ ಮಾಡಿದಾಗ ತಿಳಿದು ಬಂದಿತ್ತು. ಈ ಘಟನೆ ಪ್ರಾರಂಭವಾದಾಗ ಕೇವಲ 50-60 ಜನರಿದ್ದರು, ಅವರು ವಿದ್ಯುಚ್ಛಕ್ತಿಯ ಮಂಡಳಿಯ ಕಛೇರಿಯ ಹತ್ತಿರ ಹೋಗಿ, ಕೇಳಿದಾಗ ಸಂಬಂಧಪಟ್ಟ ಅಧಿಕಾರಿಗಳು ಸಂಯಮದಿಂದ ವರ್ತನೆ ಮಾಡಿ ಸರಿಯಾದ ಉತ್ತರವನ್ನು ಕೊಟ್ಟಿದರೆ ಇಂಥಹ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ನೇಕಾರರ ವರ್ಗದವರ ಜೊತೆಯಲ್ಲಿ ಇನ್ನಿತರ ಗೂಂಡಾಗಳು ಸೇರಿ ಇದನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಆದ್ದರಿಂದ ಇದನ್ನು ಪತ್ತೆ ಹಚ್ಚಿ ಇದರಲ್ಲಿ ಯಾರ ಕೈವಾಡವಿದೆಯೋ ಅವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ ಪೋಲೀಸಿನವರು ಬಹಳ ಸಂಯಮದಿಂದ ವರ್ತನೆ ಮಾಡಿದ್ದಾರೆ. ನಾನು ಈ ಸಮಯದಲ್ಲಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ನೇಕಾರ ವರ್ಗದವರು ಏನಿದ್ದಾರೆ ಅವರಿಗೆ ತೊಂದರೆ ಆಗದ ರೀತಿಯಲ್ಲಿ ಸೂಕ್ತ ವ್ಯವಸ್ಥೆಯನ್ನು ಮಾಡಿಕೊಡಿ, ಮತ್ತು ಯಾರು ಇದನ್ನು ದುರುಪಯೋಗ ಪಡಿಸಿಕೊಂಡಿದ್ದಾರೋ, ಅಂತಹವರ ಮೇಲೆ ಸೂಕ್ತವಾದಂಥ ಕ್ರಮವನ್ನು ತೆಗೆದುಕೊಳ್ಳಿ ಎಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ವಿದ್ಯುಚ್ಛಕ್ತಿಯ ಸರಬರಾಜಿನ ಕೊರತೆಯಿಂದಲೋ ಅಥವಾ ಬೇರೆ ಇನ್ನಿತರ ಕಾರಣದಿಂದಲೋ ಸರ್ಕಾರಕ್ಕೆ ಕೆಟ್ಟ ಹೆಸರು ತರತಕ್ಕಂಥಾ ಒಂದು ಜಾಲ ಇದ್ದರೆ ಅದನ್ನು ಪತ್ತೆ ಹಚ್ಚಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ. ರಾಮ್‌ದೇವ್ — ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ಏನೊಂದು ಘಟನೆ ನಡೆದಿದೆ, ಬಹುಶಃ ಇದು ವಿದ್ಯುಚ್ಛಕ್ತಿಯ ಲಕ್ಷಣವೇ ಹಾಗೇ ಎಂದು ಕಾಣುತ್ತಿದೆ. ಆಗಾಗ ಶಾಕ್ ಕೊಡತಕ್ಕಂಥಾದ್ದು; ಆದರ ಲಕ್ಷಣ. ಬಹುಶಃ ಇಡೀ ರಾಷ್ಟ್ರದಲ್ಲಿ, ಕೆಲವು ರಾಜ್ಯಗಳನ್ನು ಬಿಟ್ಟು ಎಲ್ಲ ರಾಜ್ಯಗಳಲ್ಲೂ ಕೂಡಾ ಈ ಕೊರತೆಯನ್ನು ನಾವು ನೋಡುತ್ತಿದ್ದೇವೆ. ವಿದ್ಯುಚ್ಛಕ್ತಿ ಕಡಿತ ಒಂದು ಕಡೆ, ಇನ್ನೊಂದು ಕಡೆ ವಿದ್ಯುಚ್ಛಕ್ತಿ ನಿಲುಗಡೆಯನ್ನು ಎಲ್ಲರೂ ಅನುಭವಿಸುತ್ತಿದ್ದೇವೆ. ಇದನ್ನು ಮೂಲಭೂತವಾಗಿ ಪರಿಹರಿಸತಕ್ಕಂಥ ಒಂದು ಪ್ರಯತ್ನವನ್ನು ಮಾಡಬೇಕು. ಈಗಾಗಲೇ ಮಾನ್ಯ ಜೆ.ಹೆಚ್. ಪಟೇಲರು ಹೋಗಿ ಆಂಧ್ರದಲ್ಲಿ ಮಾತನಾಡಿಕೊಂಡು ಬಂದಿದ್ದಾರೆ. ಆದರೆ ಅದು ಫಲಕಾರಿಯಾಗಲಿಲ್ಲ ಎಂದು ಪತ್ರಿಕೆಯಲ್ಲಿ ಓದಿದೆ. ಹಿಂದೆ, ತಮಗೆ ತಿಳಿದ ಹಾಗೆ 1972ರವರೆಗೆ ಕರ್ನಾಟಕ ರಾಜ್ಯ ವಿದ್ಯುಚ್ಛಕ್ತಿಯಲ್ಲಿ ಸರ್‌ಪ್ಲಸ್ ರಾಜ್ಯವಾಗಿತ್ತು. ಇಲ್ಲಿಂದ ನಾವು ವಿದ್ಯುಚ್ಛಕ್ತಿಯನ್ನು ಮಹಾರಾಷ್ಟ್ರಕ್ಕೆ ಕೊಟ್ಟಿದ್ದೇವೆ, ಗುಜರಾತ್‌ಗೆ ಕೊಟ್ಟಿದ್ದೇವೆ, ಆಂಧ್ರ, ತಮಿಳುನಾಡಿಗೆ ಕೊಟ್ಟಿದ್ದೇವೆ. ಹೀಗೆ ಅನೇಕ ರಾಜ್ಯಗಳಿಗೆ ನಾವು ಬಹಳ ಜನರಸ್ ಆಗಿ, ಲಿಬರಲ್ ಆ್ಯಟಿಟ್ಯೂಡ್‌ನಿಂದ ವಿದ್ಯುಚ್ಛಕ್ತಿಯನ್ನು ಕೊಟ್ಟಿರತಕ್ಕಂಥ ಕಾಲ ಇತ್ತು. ಈಗ ನಮ್ಮಲ್ಲಿ ಡೆಫಿಸಿಟ್ ಬಂದಿದೆ. ಒಂದೇ ಒಂದು ಮನವಿಯನ್ನು ನಾವು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮಾಡಿಕೊಳ್ಳುವುದೇನೆಂದರೆ, ಆಕ್ಕಪಕ್ಕದ ರಾಜ್ಯಗಳಲ್ಲಿ ವಿದ್ಯುಚ್ಛಕ್ತಿ ಹೇರಳವಾಗಿದೆ. ತಮಿಳುನಾಡಿನ ಕಲ್ಪಾಕಂನಿಂದ ನ್ಯಾಯವಾಗಿ ವಿದ್ಯುಚ್ಛಕ್ತಿಯನ್ನು ಕೊಡಬೇಕು, ಶೇಕಡಾ 25 ರಷ್ಟನ್ನು ನಮಗೆ ಕೊಡಬೇಕು. ಟ್ರಾನ್ಸ್‌ಮಿಷನ್ಸ್ ಲೈನ್ ಇದೆ, ಆದರೂ ಅವರು ಕೊಡುತ್ತಿಲ್ಲ. ಆಂಧ್ರದಲ್ಲಿ ಸರ್‌ಪ್ಲಸ್

ಇದೆ. ಮೊನ್ನೆ ನಾವು ಶ್ರೀಶೈಲಂನಲ್ಲಿ ನೋಡಿಕೊಂಡು ಬಂದಿದ್ದೇವೆ. ಅಲ್ಲಿ ವಿದ್ಯುಚ್ಛಕ್ತಿ ಸಾಕಷ್ಟಿದೆ. ಅಲ್ಲಿಂದ ವಿದ್ಯುಚ್ಛಕ್ತಿ ಕೊಟ್ಟಿದ್ದರೆ ಇಡೀ ರಾಜ್ಯ ಇವತ್ತು ಈ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳಬೇಕಾಗಿರಲಿಲ್ಲ.

ಅಧ್ಯಕ್ಷರು.— ರಾವ್‌ದೇವ್ ಅವರೇ, ದೊಡ್ಡಬಳ್ಳಾಪುರದಿಂದ ಆಂಧ್ರಪ್ರದೇಶಕ್ಕೆ ಹೋಗಿಬಿಟ್ರಿ.

ಶ್ರೀ ಪಿ. ರಾವ್ ದೇವ್.— ಇವತ್ತು ವಿದ್ಯುಚ್ಛಕ್ತಿ ಕೊರತೆ ಇದೆ. ಈ ಒಂದು ವಿದ್ಯುಚ್ಛಕ್ತಿ ಕೊರತೆ ಪರಿಣಾಮ ಎಲ್ಲಾ ಕಡೆ ಬೀರುವುದರಿಂದ ಕುಡಿಯುವುದಕ್ಕೆ ನೀರು ನಮಗೆ ಸಿಗುತ್ತಿಲ್ಲ. ಮುಂದೆ ಇದು ದೊಡ್ಡದಾಗಿ ಬೆಳೆಯದೇ ಇರುವಂತೆ ಪ್ರಯತ್ನ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ,

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೆ, ನಾನು ಮಾನ್ಯ ಸದಸ್ಯರಾದಂಥ ಶ್ರೀಮಾನ್ ಯಡಿಯೂರಪ್ಪನವರು ಹೇಳಿರತಕ್ಕಂಥ ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ಯೋಚನೆ ಮಾಡಿದ್ದೆ. ಇವತ್ತು ಬೆಳಿಗ್ಗೆ ದೊಡ್ಡಬಳ್ಳಾಪುರದಿಂದ ನನ್ನ ಹತ್ತಿರ ಜನಗಳು ಬಂದಿದ್ದರು. ಅವರಿಂದ ನಾನು ಕೆಲವು ವಿವರಗಳನ್ನು ಪಡೆದೆ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಏನು ಅಧಿಕಾರಿಗಳು ಇದ್ದಾರೆ, ಅವರ ಹತ್ತಿರ ಕೆಲವು ತಿಂಗಳುಗಳಿಂದ ಈ ನೇಕಾರರ ಸಂಘದ ಪರವಾಗಿ, ನೇಯ್ಗೆ ಮಾಡಿ ಜೀವನ ಮಾಡತಕ್ಕ ಜನಗಳ ಪರವಾಗಿ, ಪದೇ ಪದೇ ಹೋಗಿ ರೆಪ್ರೆಸೆಂಟೇಷನ್ ಕೊಟ್ಟಿದ್ದರು. ನಮಗೆ ತೊಂದರೆಯಾಗುತ್ತಿದೆ, ಕೂಡಲೇ ನೀವು ಸರಿಪಡಿಸಬೇಕೆಂದು ರೆಪ್ರೆಸೆಂಟೇಷನ್ ಕೊಟ್ಟಿದ್ದರು. ವಿದ್ಯುಚ್ಛಕ್ತಿ ಕಡಿತದ ವಿಚಾರ ನಮಗೆಲ್ಲರಿಗೂ ಗೊತ್ತಿರತಕ್ಕದ್ದೇ. ಯಾವುದೇ ಸರಕಾರ ಇರಲಿ, ಆ ಸರಕಾರವನ್ನು ದೂಷಣೆ ಮಾಡತಕ್ಕಂಥ ಪ್ರಶ್ನೆ ಇಲ್ಲ. ನಮ್ಮ ರಾಜ್ಯ ಇನ್ನೂ ಕೊರತೆಯನ್ನು ಅನುಭವಿಸತಕ್ಕಂಥ ರಾಜ್ಯ. ಆದರೆ ಎಷ್ಟು ಹೊತ್ತಿನಿಂದ ಎಷ್ಟು ಹೊತ್ತಿನವರೆಗೆ, ಯಾವ ಯಾವ ಭಾಗದಲ್ಲಿ ಕಡಿತವನ್ನು ಮಾಡಬೇಕು ಎನ್ನುವುದನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ನೋಡಿ ಇಲಾಖೆ ತೀರ್ಮಾನ ತೆಗೆದುಕೊಳ್ಳಬೇಕು. ಈ ಕಾಲವನ್ನು ಬದಲಾವಣೆ ಮಾಡಿರತಕ್ಕಂಥ ವಿಚಾರದಲ್ಲಿ ಕೂಡಾ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದಾರೆ. ಈ ವಿಚಾರದಲ್ಲಿ ಮೊದಲಿನಿಂದಲೂ ಕೂಡಾ ತಿಳಿಸುತ್ತಾ ಬಂದರು ಎಂದು ಹೇಳಿದ್ದಾರೆ. ಸ್ಥಳೀಯ ಅಧಿಕಾರಿಗಳು ಇಲಾಖೆಯಲ್ಲಿ ಏನಿದ್ದಾರೆ, ಅವರ ನಿರ್ಲಕ್ಷ್ಯತನದಿಂದ ಈ ರೀತಿಯಾಗಿದೆ. ಆದರೆ ಅವರು ಹೆಚ್ಚಿನ ಜವಾಬ್ದಾರಿ ಹೊತ್ತು ನೇಕಾರರಿಗೆ ಬಂದಿರತಕ್ಕ ತೊಂದರೆಯನ್ನು ಸರಿಪಡಿಸತಕ್ಕ ಜವಾಬ್ದಾರಿಯನ್ನು ಸ್ವಲ್ಪ ನಿರ್ವಹಣೆ ಮಾಡಿದ್ದರೆ ಪರಿಸ್ಥಿತಿ ಇಷ್ಟೊಂದು ವಿಕೋಪಕ್ಕೆ ಹೋಗುತ್ತಿರಲಿಲ್ಲ ಎನ್ನುವ ಭಾವನೆ ಸಹಜವಾಗಿ ನೇಕಾರರ ಸಂಘದವರಲ್ಲಿ ಇದೆ ಮತ್ತು ಜನರಲ್ಲಿ ಇದೆ. ಈ ವಿಚಾರದಲ್ಲಿ ಸರಕಾರಕ್ಕೆ ನಾವು ಆರ್ಜಿಗಳನ್ನು ಕಳಿಸಿಕೊಟ್ಟಿದ್ದೇವೆ, ಮಂತ್ರಿಗಳಿಗೂ ಕೂಡಾ ಕಳಿಸಿಕೊಟ್ಟಿದ್ದೇವೆ ಎನ್ನುವ ಅಭಿಪ್ರಾಯವನ್ನು ನಮಗೆ ಈ ದಿವಸ ತಿಳಿಸಿದ್ದಾರೆ. ಈ ವಿಚಾರವನ್ನು ಹೆಚ್ಚಾಗಿ ಗಮನಕ್ಕೆ ತೆಗೆದುಕೊಂಡು, ಸಚಿವರು, ಯಾರೇ ಇರಬಹುದು, ಮಾನ್ಯ ಜಾಲಪ್ಪನವರು ಇರಬಹುದು, ಯಾರಾದರೂ ಇರಬಹುದು, ಅವರು ಇದಕ್ಕೆ ಸಮಜಾಯಿಷಿ ಕೊಟ್ಟು ಏನು ಕಾರಣ ಎಂದು ವಿಚಾರ ಮಾಡಿಬಿಟ್ಟಿದ್ದರೆ, ಈ ತೊಂದರೆ ಬರುತ್ತಿರಲಿಲ್ಲ. ಇವತ್ತು ಗಾಳಿಯಲ್ಲಿ ಗುಂಡು ಹಾರಿಸಿದ್ದಾರಂತೆ, ಅದೇ ಗುಂಡು ಜನರ ಮೇಲೆ ಹಾರಿಸಿದ್ದರೆ ಪರಿಸ್ಥಿತಿ ಏನಾಗುತ್ತಿತ್ತು ? ಈಗ ಪರಿಸ್ಥಿತಿ ವಿಕೋಪಕ್ಕೆ ಹೋಗಿದೆ, ಇನ್ನೂ ಹೋಗತಕ್ಕಂಥ ಲಕ್ಷಣಗಳು ಇದ್ದಾವೆ, ಅಲ್ಲಿಗೇ ಮುಕ್ತಾಯವಾಗಿದೆ ಎಂಬ ಸಂತೋಷವನ್ನು ಈ ಸಂದರ್ಭದಲ್ಲಿ ಇಟ್ಟುಕೊಳ್ಳಬಹುದು. ಆಮೇಲೆ ಮಾನ್ಯ ಜಾಲಪ್ಪನವರ ಹೇಳಿಕೆ ಪ್ರಕಾರ, ಇದರಲ್ಲಿ ಕೆಲವರ ಕೈವಾಡ ಇದೆ ಎಂಬುದು, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಕೈವಾಡ ಇದೆ ಅಥವಾ ಇಲ್ಲ ಎಂಬತಕ್ಕಂಥಾ ವಿಚಾರವನ್ನು ತನಿಖೆ ಮಾಡಲಿ, ಕೈವಾಡ ಇದ್ದರೆ, ಇಂತಹವರದ್ದೇ ಇದೆ ಎಂದು ತಿಳಿಸಲಿ. ಮಾನ್ಯ ಜಾಲಪ್ಪನವರ ಪ್ರತಿಕ್ರಿಯೆ ಪ್ರಕಾರ, ಪತ್ರಿಕೆಯಲ್ಲಿ ಬಂದ ಹಾಗೆ, ಅದು ಏನಿದೆ ಅದನ್ನು ಈ ಸದನದಲ್ಲಿ ತಿಳಿಸಬಹುದು. ನಿಮಗೆ ಆ ಒಂದು ಹಕ್ಕು ಇದೆ. ಮಾನ್ಯ ಮುಖ್ಯ ಮಂತ್ರಿಗಳಿಗೆ ತನಿಖೆಗೆ ಬಿಟ್ಟು ಕೊಡುತ್ತೀರಾ ಅಥವಾ ನೀವೇ ಮಾಡುತ್ತೀರಾ. ಅದು ನಿಮಗೆ ಬಿಟ್ಟಿರತಕ್ಕಂಥಾ ವಿಚಾರ. ನಾನು ಇಷ್ಟು ಮಾತ್ರ ಹೇಳುತ್ತೇನೆ, ರಾಜ್ಯದ ಅನೇಕ ಕಡೆಗಳಲ್ಲಿ ತೊಂದರೆ ಇದೆ. ದೊಡ್ಡಬಳ್ಳಾಪುರದ ವಿಚಾರವನ್ನು ಮತ್ತೊಂದು ಕಡೆಗೆ ಹರಿಸುವುದು ಬೇಕಾಗಿಲ್ಲ. ಅಲ್ಲಿರತಕ್ಕಂಥ ಪ್ರಶ್ನೆ ಏನೆಂದರೆ, ಸ್ಥಳೀಯವಾಗಿ ಇರತಕ್ಕಂಥ ಅಧಿಕಾರಿಗಳ ಮಟ್ಟದಲ್ಲಿ ಅವರ ಕಾರ್ಯಕ್ರಮದಲ್ಲಿ ಯಾವ ಒಂದು ಲೋಪದೋಷ ಇದೆ, ಅರ್ಥಾತ್ ವಿದ್ಯುಚ್ಛಕ್ತಿ ಇಲಾಖೆಯಲ್ಲಿ, ಆ ಲೋಪದೋಷವನ್ನು ವಿಮುಕ್ತಿ ಮಾಡತಕ್ಕಂಥ ದೃಷ್ಟಿಯಿಂದ, ಅದಕ್ಕೆ ಪರಿಹಾರ ಕಂಡುಹಿಡಿಯುವ ದೃಷ್ಟಿಯಿಂದ, ಜನರು ಈ ರೀತಿಯಲ್ಲಿ ಕಾರ್ಯಕ್ರಮ ಹಾಕಿದ್ದಾರೆ, ರೊಚ್ಚಿಗೇಳುವುದಕ್ಕೆ, ಸಿಟ್ಟು ಬರುವುದಕ್ಕೆ, ತಮ್ಮ ತೊಂದರೆಯನ್ನು ಈ ರೀತಿ ತೋಡಿಕೊಳ್ಳುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ಇವತ್ತು ಲೂಟಿಯಾದರೆ ಅದು ಯಾರಾದರೂ ಸಂತೋಷ ಪಡತಕ್ಕಂಥ ವಿಚಾರ ಅಲ್ಲ. ಆಸ್ತಿ ಲೂಟಿಯಾದರೆ ಅದು ಖಾಸಗಿಯವರದ್ದೇ ಇರಬಹುದು, ಸರಕಾರದ್ದೇ ಇರಬಹುದು, ಯಾರದ್ದೇ ಇರಬಹುದು, ಆ ವಿಚಾರಕ್ಕೆ ನಾನು ಹೋಗುವುದಿಲ್ಲ. ಖಾಸಗಿ ಆದರೂನೂ, ಸಾರ್ವಜನಿಕರದ್ದಾದರೂನೂ ಆಸ್ತಿ ಆಸ್ತೀನೇ. ಅದು ಹಾಳಾಗಬಾರದು ಎಂಬ ಅಭಿಪ್ರಾಯವನ್ನು ನಾನು ಇಟ್ಟುಕೊಂಡಿದ್ದೇನೆ. ಪರಿಸ್ಥಿತಿ ಈ ಮಟ್ಟಕ್ಕೆ ಹೋಗಿರತಕ್ಕಂಥಾದ್ದಕ್ಕೆ ತಪ್ಪು ಇಲಾಖೆಯದು, ಸರಕಾರದ್ದು ಎಂಬ ಅಂಶ

ವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಉಳಿದಿರುತಕ್ಕ ವಿವರಗಳನ್ನು ಬೇರೆಯವರು ಪ್ರಸ್ತಾಪ ಮಾಡಿದ್ದಾರೆ. ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಮಾನ್ಯ ಅಧ್ಯಕ್ಷರೇ, ಡೆಕ್ಕನ್ ಹೆರಾಲ್ಡ್‌ನಲ್ಲಿ ಒಂದು ವಿಚಾರ ಇದೆ. ಸ್ಥಳೀಯ ಅಧಿಕಾರಿಗಳು ಯಾವರೀತಿ ಉದ್ಧಟತನದಿಂದ ವರ್ತನೆ ಮಾಡಿದ್ದಾರೆ, ಮತ್ತು ಯಾವ ರೀತಿ ನಿರ್ಲಕ್ಷ್ಯತನದಿಂದ ವರ್ತನೆ ಮಾಡಿದ್ದಾರೆ, ಅದು ಪ್ರಮುಖವಾದುದು. ಅದು ಡೆಕ್ಕನ್ ಹೆರಾಲ್ಡ್ ನಲ್ಲಿದೆ. Deccan Herald, Dated 1-2-84 page 9, Col. 4 "The A.E.E. at the K.E B. Office, explaining this morning's incidents, said the group which demonstrated before the office was told of the problems and their inability to do anything about them. When the crowd became restless and began to grow violent, power supply was restored but phone calls and demands are made to stop supply, by some who did not want the agitation and to peter out ".... ... ." when the crowd became violent power supply was restored .. ಅವರು ಯಾವಾಗ ರೆಸ್ಪ್ಟಲೆಸ್ ಆದರು When the crowd became violent, restored power supply was. ತಾಂತ್ರಿಕ ದೋಷದಿಂದ ಪೀಣ್ಯದಲ್ಲಿ ವಿದ್ಯುತ್ ನಿಂತು ಹೋಗಿತ್ತು. ಆದರೆ ಆ ದಿವಸ ಹಾಗಾಗಲಿಲ್ಲ. ಶುಕ್ರವಾರದಿಂದ ಇದು ಸತತವಾಗಿ ನಡೆಯುತ್ತಿರುವ ವಿಚಾರ. ಇದು ಸಡನ್ ಆಗಿ ಪವರ್ ಸ್ಟಾಪ್ ಆದದ್ದಲ್ಲ. ಅಧಿಕಾರಿಗಳ ಅಲಕ್ಷ್ಯತೆಯಿಂದ ಈ ರೀತಿ ಆಗಿದೆಯೆಂದು ಸ್ಪಷ್ಟವಾಗಿ ಇಲ್ಲಿ ಕಾಣುತ್ತಿದೆ.

ಶ್ರೀ ರಾವ್-ಕೃಷ್ಣ ಹೆಗ್ಡೆ.— ಅವರು ಭಾಷಣ ಮಾಡುತ್ತಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಭಾಷಣ ಅಲ್ಲ. ತಮ್ಮ ಗಮನಕ್ಕೆ ನಿನ್ನೆ ನಡೆದ ವಿಚಾರವನ್ನು ತರುತ್ತಿದ್ದೇನೆ. ಅಧಿಕಾರಿಗಳ ಅಲಕ್ಷ್ಯತೆ ಇದ್ದರೆ, ತಕ್ಷಣ ಅವರ ಮೇಲೆ ಕ್ರಮ ತೆಗೆದುಕೊಳ್ಳದೇ ಹೋದರೆ ಜನರಲ್ಲಿ ವಿಶ್ವಾಸ ಬೆಳೆಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತೆ ಅಲಕ್ಷ್ಯತನ, ಉದ್ಧಟತನ ಅಧಿಕಾರಿಗಳಲ್ಲಿ ಬೆಳೆಯುತ್ತದೆ. ಇದನ್ನು ನಾನು ಸರಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜೆ.ಹೆಚ್. ಪಟೇಲ್.— ಮಾನ್ಯ ಅಧ್ಯಕ್ಷರೇ, ಇಲ್ಲಿ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥ ವಿಷಯಗಳನ್ನು ಬಿಟ್ಟು ಹೇಳುವುದಾದರೆ ಇಲ್ಲಿ ದೊಡ್ಡಬಳ್ಳಾಪುರ ಒಂದೇ ಅಲ್ಲ, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ, ಗೌರಿಬಿದನೂರು ಸುತ್ತಮುತ್ತಲ ಭಾಗದಲ್ಲಿ ಕಳೆದ ಒಂದು ವಾರದಿಂದ ವಿದ್ಯುತ್ ಸರಬರಾಜು erratic ಆಗಿತ್ತು. ಇದಕ್ಕೆ ಕಾರಣ ಏನು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಟ್ರಾನ್ಸ್‌ಪಾರ್ಮಿಂಗ್ ಲೈನ್ ಅಲ್ಲ, ಈ ಒಂದು ಸಿಸ್ಟಮ್‌ನ ಇನ್‌ಸ್ಟೆಬಿಲಿಟಿಯಿಂದ ಆದದ್ದು. ಆದಕ್ಕೆ ಯಾರು ಕಾರಣರು ಎನ್ನುವುದನ್ನು ನಾವು ತನಿಖೆ ಮಾಡಿಸುತ್ತಾ ಇದ್ದೇವೆ. ಇದರ ಜೊತೆಗೆ ದೊಡ್ಡಬಳ್ಳಾಪುರದ ಕೆಲವು ರೈತರು ಹಿಂದೆ ಒಂದು ಸಾರಿ ಬಂದು ಮನವಿ ಕೊಟ್ಟಿರು. ದೊಡ್ಡಬಳ್ಳಾಪುರದ ನಾಗರೀಕರು ಬಂದಿರಲಿಲ್ಲ. ರೈತರು ಬಂದಾಗ ನಾನು ತಕ್ಷಣ ಅಧಿಕಾರಿಗಳನ್ನು ಕರೆಸಿ ಎರಡು ತಿಂಗಳು ಅವರು ಕೇಳಿದಂತೆ, 6 ಗಂಟೆ ಪವರ್‌ಕಟ್ ಇದ್ದುದನ್ನು ನಾಲ್ಕು ಗಂಟೆಗೆ ಇಳಿಸಲಾಯಿತು. ಅವರು ಸಮಾಧಾನವನ್ನು ವ್ಯಕ್ತಪಡಿಸಿದರು. ನಾನು ಒಂದು ಸಲ ದೊಡ್ಡಬಳ್ಳಾಪುರಕ್ಕೆ ಹೋಗಿದ್ದಾಗ ಅವರು ನನ್ನ ಹತ್ತಿರ ಬಂದು ಹೇಳಿದ್ದರು. ದೊಡ್ಡಬಳ್ಳಾಪುರ ಟೌನ್‌ನಲ್ಲಾಗಿರುವುದಕ್ಕೂ, ರೈತರಿಗೂ ಏನೂ ಸಂಬಂಧ ಇಲ್ಲ. ಯಾವುದಾದರೂ ವಿನಾಕಾರಣ ಒಂದು ಬೆಂಕಿ ಬಿದ್ದ ಕಡೆಯಲ್ಲಿ ಬೀಡಿ ಹಚ್ಚಿ ಕೊಳ್ಳುವುದಕ್ಕೆ ಹೋಗುವುದು ಬೇಡ. ಮಾನ್ಯ ವಿರೋಧಪಕ್ಷದ ನಾಯಕರು ತಿಳಿದುಕೊಳ್ಳಬೇಕು. ದೊಡ್ಡಬಳ್ಳಾಪುರದ ಘಟನೆಗೂ, ರೈತರಿಗೂ ಏನೂ ಸಂಬಂಧ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಹಾಗಂತ ನಾನು ಹೇಳಲಿಲ್ಲ

ಅಧ್ಯಕ್ಷರು.— ನೀವು ಹೇಳಲಿಲ್ಲ, ಅವರು ಹೇಳಿದರು, ಚಿಕ್ಕೇಗೌಡರು ಹೇಳಿದರು.

ಶ್ರೀ ಜೆ. ಹೆಚ್. ಪಟೇಲ್.— ನೀವು ಹೇಳದೇ ಇದ್ದರೆ ಬಹಳ ಸಂತೋಷ. ಇದರೊಳಗೆ ರೈತರ ಸಂಬಂಧ ಇಲ್ಲ. ಹಾಗೆಂದ ತಕ್ಷಣ ರೈತರಿಗೆ ತೊಂದರೆಯಾಗುತ್ತಿಲ್ಲ ಎಂದಲ್ಲ. ರೈತರಿಗೆ ತೊಂದರೆಯಾಗುತ್ತಿದೆ. ಇದಕ್ಕೆ ಬಹಳ ಆಳವಾದ ಕಾರಣಗಳು ಇವೆ. ಇದನ್ನು ಸರಿಪಡಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ.

ಶ್ರೀ ಎಸ್ ಬಂಗಾರಪ್ಪ.— ನಿಮ್ಮ ದೀಪ ಉರಿಯುತ್ತಿದೆ. ಅದರಲ್ಲೇ ಬಲ್ಬನ್ನು ಹಚ್ಚುವುದು ಬೇಡ.

ಶ್ರೀ ಜೆ. ಹೆಚ್. ಪಟೇಲ್.— ಟ್ಯೂಬ್ ಲೈಟ್‌ಗೂ ಬಲ್ಬಿಗೂ ವ್ಯತ್ಯಾಸ ಏನೆಂದರೆ, ಓಲ್ಟೇಜ್ ಕಡಿಮೆ ಇದ್ದರೂ ಬಲ್ಬು ಉರಿಯುತ್ತಿರುತ್ತದೆ. ಆದರೆ ಟ್ಯೂಬ್ ಲೈಟ್ ಹತ್ತುವುದಿಲ್ಲ, ಅದಕ್ಕೆ ನಾನು ಏನು ಮಾಡುವುದಕ್ಕಾಗುತ್ತದೆ ?

(ನಗು)

ಶ್ರೀ ಎಸ್. ಬಂಗಾರಪ್ಪ.— ನಿಮ್ಮ ಇಲಾಖೆಯೇ ಟ್ಯೂಬ್‌ಲೈಟ್.

ಶ್ರೀ ಎಂ. ವೀರಪ್ಪ ಮೊಯಿಲಿ.— ಕೆಲವು ಸಾರಿ ಗಂಟೆಗಟ್ಟಲೆ ಓಲ್ಟೇಜ್ ಇದ ರೂ ಟ್ಯೂಬ್ ಲೈಟ್ ಉರಿಯುವುದಿಲ್ಲ. ದೀಪದಿಂದ ಉರಿಯುತ್ತಿದ್ದೀರಿ ಅಷ್ಟೆ.

ಶ್ರೀ ಜೆ. ಹೆಚ್. ಪಟೇಲ್.— ಓಲ್ಟೇಜ್ ಬ್ರೇಕ್ ಡೌನ್ ಆಗುತ್ತಿರುವುದನ್ನು ನಾನು ಒಪ್ಪಿ ಕೊಳ್ಳುತ್ತಿದ್ದೇನೆ. ಇರುವ ಸಿಸ್ಟೆಮ್‌ನಲ್ಲೇ ತೊಂದರೆ ಇದೆ, ಇಲ್ಲ ಎಂದು ಹೇಳುತ್ತಿಲ್ಲ. ಈ ವಿಷಯ ತಿಳಿದ ತಕ್ಷಣ ನಾನು ದೂರವಾಣಿಯ ಮೂಲಕ ವಿಚಾರ ಮಾಡಿರುವುದರ ಜೊತೆಗೆ ನಮ್ಮ ಚೀಫ್ ಇಂಜಿ ನೀಯರ್‌ರವರನ್ನು ನಿನ್ನೆ ಸಂಜೆಯೇ ಅಲ್ಲಿಗೆ ಕಳುಹಿಸಿದ್ದೇನೆ ಅಕಸ್ಮಾತ್ ನಮ್ಮ ಅಧಿಕಾರಿಗಳ ಬೇಜ ವಾಬ್ದಾರಿ ವರ್ತನೆಯಿಂದ ಏನಾದರೂ ಇದು ಆಗಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ನಿನ್ನೆ ನಡದಂತಹ ಘಟನೆಯ ಬಗ್ಗೆ ನನಗೆ ಇಲ್ಲಿಯವರೆವಿಗೆ ಬಂದಿರತಕ್ಕ ವರ್ತಮಾನದ ಪ್ರಕಾರ ಕೆ.ಇ.ಬಿ. ಆಫೀಸಿಗೆ ಸುಮಾರು 300-400 ಜನ ಬಂದಾಗ ಅವರ ಜೊತೆಯಲ್ಲಿ ಚರ್ಚೆ ಮಾಡಿ, ಇದು ಪೀಣ್ಯದಲ್ಲಿ ರುವ ವಿದ್ಯುತ್ ಕೇಂದ್ರದಲ್ಲಿ ಸರ್ಕ್ಯೂಟ್ ಬ್ರೇಕರ್ ಹೋಗಿದೆ, ಅದು ಇಂಪೋರ್ಟೆಡ್ ಮಿಷನ್, ಆದನ್ನು ನಮ್ಮ ದೇಶದಲ್ಲಿ ತಯಾರು ಮಾಡಲಾಗುವುದಿಲ್ಲ, ಈಗಲೇ ಅದನ್ನು ತರಿಸಿ ಹಾಕುವುದಕ್ಕಾಗು ವುದಿಲ್ಲವೆಂದು ಎಕ್ಸ್‌ಪ್ಲೈನ್ ಮಾಡಿದ ಮೇಲೆ ಆ ಜನ ಕೆ.ಇ.ಬಿ. ಯನ್ನು ಬೈಕೊಂಡು ಹೋಗಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.— ಕೆ.ಇ.ಬಿ. ಆಫೀಸರ್ಸ್‌ನ್ನು ಫೇರಾವ್ ಮಾಡಿದ್ದಾರೆಂದು ಪತ್ರಿಕೆ ಯಲ್ಲಿ ವರದಿಯಾಗಿದೆ.

ಶ್ರೀ ಜೆ.ಎಚ್. ಪಟೇಲ್.— ಯಾರೋ ಒಬ್ಬರು ಅಧಿಕಾರಿಗಳು ಇವರಿಗೆ ಹೆದರಿ ಬಾಗಿಲನ್ನು ಹಾಕಿಕೊಂಡಿರಬಹುದು. ಬೇರೆಯವರು ಅಲ್ಲಿಗೆ ಹೋಗಿ ಆ ಬಾಗಿಲನ್ನು ತೆಗೆಸಿ ಏಕಪ್ಪ ಬಾಗಿಲು ಹಾಕಿ ಕೊಂಡಿದ್ದೀರಾ ಎಂದು ಕೇಳಿ ಬಾಗಿಲನ್ನು ತೆಗೆಸಿದ್ದಾರೆ. ಇದು ನನ್ನ ಕೈಯಲ್ಲಿ ಆದದ್ದಲ್ಲ, ಪೀಣ್ಯದಲ್ಲಿ ಆದದ್ದು. ಪ್ರತಿದಿವಸ 10 ನಿಮಿಷ, 20 ನಿಮಿಷ, ಮತ್ತು ದಿವಸದಲ್ಲಿ 2-3 ಸಾರಿ ಹೀಗೆ ಆಗಿದ್ದೂ ಹೌದು. ಆದು ತಪ್ಪು ಮೂರು ಗಂಟೆ ಏಕಾಏಕಿ ಅಂದರೆ ಬೆಳಿಗ್ಗೆ 8-30 ಗಂಟೆಯಿಂದ 11:30 ಗಂಟೆ ಯವರೆಗೆ ವಿದ್ಯುಚ್ಛಕ್ತಿ ಸರಬರಾಜು ಇಲ್ಲದಿದ್ದಾಗ, ಜನರು ಬಂದಾಗ, ಪೀಣ್ಯದಲ್ಲಿ ಸರ್ಕ್ಯೂಟ್ ಬ್ರೇಕರ್ ಹೋಗಿದೆ. ಅದು ಇಂಪೋರ್ಟೆಡ್ ಮಿಷನ್, ನಮ್ಮಲ್ಲಿ ಅದನ್ನು ತಯಾರು ಮಾಡುತ್ತಿಲ್ಲ ಎಂದು ಹೇಳಿದ್ದಾರೆ. ನಂತರ ಕೊನೆಗೆ ಏನೋ ಮಾಡಿ ಬೇರೆ ಕಡೆಯಿಂದ ತಂದು ವಿದ್ಯುಚ್ಛಕ್ತಿಯನ್ನು ಸರಬ ರಾಜು ಮಾಡಿದ್ದಾರೆ. ಇಲ್ಲಿ ಇರತಕ್ಕಂತಹ ಪ್ರಶ್ನೆ ಏನೆಂದರೆ, ಕೆಲವೊಮ್ಮೆ ಮನುಷ್ಯನ ಶಕ್ತಿ ಮೀರಿ ಬರತಕ್ಕಂತಹ ಕೆಲವು ತೊಂದರೆಗಳು ಇದ್ದಾವೆ. ಕೆಲವು ಸಾರಿ ಮಿಸ್ ಮ್ಯಾನೇಜ್‌ಮೆಂಟ್‌ನಿಂದಲೂ ಆಗುತ್ತದೆ. ಅನಾವಶ್ಯಕವಾಗಿ ಯಾರಿಗಾದರೂ ತೊಂದರೆ ಕೊಡಬೇಕೆಂದು ಇರುವುದಿಲ್ಲ. ಪವರ್ ಲೂಮಿನವರಿಗೆ ಅವರ ಉತ್ಪಾದನೆ ಕಡಿಮೆ ಮಾಡಬೇಕೆಂದು ಯಾರಿಗಾದರೂ ಇರುತ್ತದೆಯೇ? ಯಾರಿಗೂ ಇರುವುದಿಲ್ಲ. ಕೆ.ಇ.ಬಿ. ಅವರಿಂದ ಕಳೆದ 3 ದಿವಸಗಳಿಂದ ಆದಂತಹ ವಿದ್ಯುಚ್ಛಕ್ತಿ ಕೊರತೆಯಿಂದ ಪಿ.ಎಲ್.ಡಿ. ಬ್ಯಾಂಕ್‌ಗೆ ಏಕೆ ಹೋಗಬೇಕು ? ಟಿ.ಎ.ಪಿ.ಸಿ.ಎಂ.ಎಸ್.ಗೆ ಏಕೆ ಹೋಗಬೇಕು? ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಏಕೆ ಹೋಗಬೇಕು? ಸಮಗ್ರವಾಗಿ ಹೇಳಬಹುದು. ಸರ್ಕಾರದ ಮೇಲೆ ಜನರಿಗೆ ವಿಶ್ವಾಸ ಇಲ್ಲದ್ದರಿಂದ ಆ ರೀತಿ ಹೋದರು ಅಂತ ಹೇಳಬಹುದು; ಅದು ಆಲ್ಲ. ಇದೇ ಸಂದರ್ಭದಲ್ಲಿ ಕೆಲವು ಆಂಟಿ ಸೋಷಿಯಲ್ ಎಲಿಮೆಂಟ್ಸ್ ಅಂತ ಏನು ಆಂಗ್ಲಭಾಷೆಯಲ್ಲಿ ಕರೆಯುತ್ತೇವೆ, ಕೆಲವು ಸಮಾಜಘಾತಕ ಶಕ್ತಿಗಳು ಇಂತಹ ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತಾರೆ. ಇದರಲ್ಲಿ ಯಾವುದೇ ರಾಜಕೀಯ ಶಕ್ತಿ ಇಲ್ಲ ಅಂತ ನನಗನ್ನಿಸಿದೆ. ಇದರ ಬಗ್ಗೆ ಹೇಗೂ ತನಿಖೆಯಾಗುತ್ತದೆ. ಮುಂದೆ ಅದು ಗೊತ್ತಾಗುತ್ತದೆ. ಇದರಲ್ಲಿ ಸಮಾಜಘಾತುಕ ಶಕ್ತಿಗಳು ಸೇರಿಕೊಂಡು ಡೈರಿಯಲ್ಲಿ ಹಾಲು ತೆಗೆದುಕೊಂಡು ಬಂದು ಹೊರಗೆ ಚೆಲ್ಲುವುದು, ಬ್ಯಾಂಕಿನಲ್ಲಿ ದುಡ್ಡನ್ನು ಲೂಟಿ ಮಾಡುವುದು ಇದನ್ನು ಯಾರೂ ಒಪ್ಪುವುದಿಲ್ಲ. ಆದ್ದರಿಂದ ಇದರಲ್ಲಿ ಪೂರ್ಣವಾಗಿ ಸಮಾಜಘಾತುಕ ಶಕ್ತಿಗಳೇ ಇದನ್ನು ಮಾಡಿದ್ದಾರೆ. ಅವರೇ ಇದಕ್ಕೆ ಕಾರಣರಾಗಿದ್ದಾರೆ. ಕಳ್ಳನಿಗೆ ಒಂದು ಪಿಳ್ಳೆ ನೆವ ಅಂತ ಕೆ.ಇ ಬಿ. ಮೇಲೆ ಹೇಳುವುದು ಆದನ್ನೂ ಸರಿಪಡಿಸುತ್ತೇನೆ. ಮತ್ತೊಂದು ವಿಷಯವೇನೆಂದರೆ, ಈಗ ವಿದ್ಯುಚ್ಛಕ್ತಿ ಇಲಾಖೆಯ ಕಾರ್ಯದರ್ಶಿ, ಹಾಗೂ ಕೆ.ಇ.ಬಿ. ಚೇರ್ಮನ್‌ರನ್ನು ಅಲ್ಲಿಗೆ ಕಳುಹಿಸಿದ್ದೇವೆ.

ಡಾ. ವಿ.ಎಸ್. ಆಚಾರ್ಯ.— ನಾನು ಹೇಳುವಂತಹ ವಿಷಯ ಸಹ ಸ್ವಲ್ಪ ಮಟ್ಟಿಗೆ ದೊಡ್ಡ ಬಳ್ಳಾಪುರದಲ್ಲಿ ಆದಂತಹ ಘಟನೆಯ ಸಂಬಂಧವಾದುದಾಗಿದೆ. ಇವತ್ತು ವಿದ್ಯುಚ್ಛಕ್ತಿಯ ಕಡಿತದ ಪ್ರಶ್ನೆ ಅಥವಾ ಆಗಾಗ್ಗೆ ವಿದ್ಯುಚ್ಛಕ್ತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೋಗುತ್ತಿರುವುದು.....

ಅಧ್ಯಕ್ಷರು.— ಈಗ ಅದು ಮುಗಿದಿದೆ. ಉಳಿದದ್ದನ್ನು ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಮಾತನಾಡಬಹುದು.

ಡಾ. ವಿ.ಎಸ್. ಆಚಾರ್ಯ.— ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ವೀರಪ್ಪ ಮೊಯ್ಲಿ ಯವರು ಹೇಳಿದ ಹಾಗೆ ಎಲ್ಲ ಕಡೆ ಅಧಿಕಾರಿಗಳು, ವಿದ್ಯುಚ್ಛಕ್ತಿಯನ್ನು 2–3ಗಂಟೆ ಕಡಿತ ಮಾಡುವುದಲ್ಲದೆ

ಅನಾವಶ್ಯಕವಾಗಿ ಒಂದೇ ದಿವಸದಲ್ಲಿ ಅನೇಕಬಾರಿ ವಿದ್ಯುಚ್ಛಕ್ತಿ ಕಡಿತವನ್ನು ಮಾಡಿದ್ದು ಇದೆ. ಇದರ ಬಗ್ಗೆ ನಮ್ಮ ಜಿಲ್ಲೆಯಿಂದ ದೂರವಾಣಿಯ ಮೂಲಕ ವರದಿಗಳು ನಮಗೆ ಬಂದಿವೆ. ವಿದ್ಯುಚ್ಛಕ್ತಿಯ ಕಡಿತದಿಂದ ಕೆಲವೊಂದು ಉದ್ದಿಮೆಗಳು ಕಡಿತದ ಅವಧಿಯಲ್ಲಿ ನಿಲ್ಲಬಹುದು. ಇನ್ನು ಕೆಲವು ಸಣ್ಣಪ್ರಮಟ್ಟ ಪ್ಲಾಸ್ಟಿಕ್ ಇಂಡಸ್ಟ್ರೀಸ್, ಕೆಲವು ಸಣ್ಣಸಣ್ಣ ಫೌಂಡರಿಗಳು, ಮತ್ತೆ ಎಲೆಕ್ಟ್ರಿಕ್ ಕೇಬಲನ್ನು ತಯಾರು ಮಾಡತಕ್ಕಂತಹ ಸಣ್ಣಸಣ್ಣ ಯೂನಿಟ್‌ಗಳು ಹೆಚ್ಚು ಇರುವಂಥಾದ್ದು ನಮ್ಮ ಜಿಲ್ಲೆಯಲ್ಲಿ. ಕಳೆದವಾರದ ಒಂದು ವರದಿಯನ್ನು ನಮಗೆ ಕಳುಹಿಸಿದ್ದಾರೆ. ಬೆಳಿಗ್ಗೆ 9ಗಂಟೆಗೆ ಪವರ್ ಬಂದರೆ ನಂತರ 9-15 ಕ್ಕೆ ಪವರ್ ಹೋದದ್ದು ಮಧ್ಯಾಹ್ನ 1-30 ಗಂಟೆಯವರೆಗೆ ಬಂದಿಲ್ಲ.

ಅಧ್ಯಕ್ಷರು.— ವಿವರಕ್ಕೆ ತಾವು ಹೋಗುತ್ತಿದ್ದೀರಲ್ಲಾ.

ಡಾ. ವಿ.ಎಸ್. ಆಚಾರ್ಯ.— ಸ್ಥಳೀಯ ಅಧಿಕಾರಿಗಳೂ ಸಮಾಧಾನಕರವಾದ ಉತ್ತರವನ್ನು ಕೊಡುವುದಿಲ್ಲ. ಮೇಲಾಗಿ ಈ ಮೂರು ಗಂಟೆಯ ವಿದ್ಯುಚ್ಛಕ್ತಿ ಕಡಿತದಲ್ಲಿ ರಿಪೇರಿಯನ್ನು ಅವರು ಮಾಡಿಕೊಳ್ಳುವುದಕ್ಕೆ ಸಾಧ್ಯತೆ ಇದೆ. ಆದರೂ ಅವರು ಆಗ ಮಾಡುವುದಿಲ್ಲ. ಅದನ್ನು ರಿಪೇರಿ ಮಾಡುವುದಕ್ಕಾಗಿ ಮತ್ತೊಂದು ಸಾರಿ ವಿದ್ಯುಚ್ಛಕ್ತಿ ಕಡಿತವನ್ನು ಮಾಡುವುದು ಈ ರೀತಿ ಸ್ಥಳೀಯ ಅಧಿಕಾರಿಗಳು ಮಾಡುತ್ತಿದ್ದಾರೆ. ನಮ್ಮ ಜಿಲ್ಲೆಗೆ ಶಿವಮೊಗ್ಗದಿಂದ ವಿದ್ಯುಚ್ಛಕ್ತಿ ಬರುವುದು. ಶಿವಮೊಗ್ಗದಲ್ಲಿ ಯಾವಾಗ ವಿದ್ಯುಚ್ಛಕ್ತಿ ಕೊರತೆ ಬಿದ್ದರೆ ತಕ್ಷಣ ಅದನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡುವುದು. ಈ ರೀತಿ ಮಾಡುತ್ತಿದ್ದಾರೆ. ಈ ರೀತಿ ಇನ್ನು ಮುಂದೆ ಆಗದಂತೆ ನೋಡಿಕೊಳ್ಳಬೇಕೆಂದು ನಾನು ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ.ಎಸ್. ಕೃಷ್ಣನ್.— ನಾನು ಬಹಳ ಮುಖ್ಯವಾದ ವಿಷಯವೊಂದನ್ನು ಸಭೆಯ ಮೂಲಕ ಮಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇರುವುದರಿಂದ ಅವರ ಗಮನಕ್ಕೆ ತರಬೇಕಾಗಿದೆ. ಸುಮಾರು 7600ಜನ ಸ್ಥಳೀಯ ಪ್ರಾಥಮಿಕ ಶಿಕ್ಷಕರು ಕಳೆದ 26ನೇ ತಾರೀಖಿನ ದಿವಸದಿಂದ ಇಲ್ಲಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಇವತ್ತಿನ ದಿವಸ ಸುಮಾರು 3-4 ಸಾವಿರ ಜನ ಸೇರಿ ದೊಡ್ಡ ಮೆರವಣಿಗೆಯನ್ನು ತೆಗೆದುಕೊಂಡು ಬರುತ್ತಿದ್ದಾರೆ. ಈ ಸಮಸ್ಯೆಯನ್ನು ಹಿಂದೆಯೂ ಸಹ ಮಾನ್ಯ ಮಂತ್ರಿಗಳ ಗಮನಕ್ಕೆ ನಾನು ತಂದಿದ್ದೆ. ಆದೇ ಸ್ಥಾನದಿಂದ ಅವರು ಭರವಸೆ ಕೊಟ್ಟರು. ಅದು ಏನೆಂದರೆ, ಅವರನ್ನು ಖಾಯಂ ಮಾಡುತ್ತೇವೆ ಎಂಬ ಭರವಸೆಯನ್ನು ಇಲ್ಲೇ ಕೊಟ್ಟರು. ಆದು ಈಗ ಏನಾಗಿದೆ ಎಂದರೆ ಇವರು ಮಾಡಿರುವಂತಹ ನೇಮಕಾತಿ ಸಮಿತಿಗಳು ಏನು ಇವೆ, ಆ ನೇಮಕಾತಿ ಸಮಿತಿಗಳ ಮೂಲಕ ಈ ಶಿಕ್ಷಕರು ಹೋಗಬೇಕೆಂದು ಹೇಳಿದ್ದಾರೆ. ಇವರೆಲ್ಲರೂ ಸ್ಥಳೀಯ ಶಿಕ್ಷಕರು. ಇವರಿಗೂ ಬೇರೆ ಸ್ಥಳೀಯ ಶಿಕ್ಷಕರಿಗೂ ವ್ಯತ್ಯಾಸ ಇದೆ. ಆ ವ್ಯತ್ಯಾಸವನ್ನು ದುರಾದೃಷ್ಟವಶಾತ್ ನಮ್ಮ ಸರ್ಕಾರ ಕಂಡುಕೊಳ್ಳುವುದಕ್ಕೆ ಇದುವರೆವಿಗೂ ಏಕೆ ಪ್ರಯತ್ನ ಮಾಡಲಿಲ್ಲ? ಆ ವ್ಯತ್ಯಾಸ ಏನು ಎಂದರೆ, ಇವರನ್ನು ರೋಸ್ಟರ್ ಸಿಸ್ಟಂ ಪ್ರಕಾರವೇ ಹಿಂದೆ ನೇಮಕ ಮಾಡಿಕೊಂಡಿದ್ದಾರೆ. ಮತ್ತೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನ ಮೂಲಕ ಹೆಸರನ್ನು ತರಿಸಿ ಅವರಲ್ಲಿ ಆಯ್ಕೆ ಮಾಡಿದಂತಹವರು; ಮತ್ತೆ ಇವರಿಗೆಲ್ಲ ಟಿ.ಸಿ.ಎಚ್. ಆಗಿದೆ. ಜೊತೆಗೆ ಎಸ್.ಎಸ್.ಎಲ್.ಸಿ. ಕ್ವಾಲಿಫಿಕೇಷನ್ ಏನು ಇರಬೇಕು ಆದೂ ಇದೆ. ಮತ್ತೆ ಮೂರು-ನಾಲ್ಕು ವರ್ಷಗಳ ಅನುಭವ ಕೂಡ ಇದೆ ಇಷ್ಟೆಲ್ಲಾ ಅರ್ಹತೆ ಇದ್ದರೂ ಅವರನ್ನು ಪುನಃ ನೇಮಕಾತಿ ಸಮಿತಿಯ ಮೂಲಕ ಕಳುಹಿಸತಕ್ಕಂಥಾದ್ದು ಯಾವ ನ್ಯಾಯ? ಆದುದರಿಂದ ಮಾನ್ಯ ಮಂತ್ರಿಗಳು ಇದರಲ್ಲಿ ಇರತಕ್ಕಂತಹ ವ್ಯತ್ಯಾಸವನ್ನು ಕಂಡುಕೊಳ್ಳಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಎಂ ಎಸ್. ಕೃಷ್ಣನ್.— ನಾನು ಈ ಪ್ರಶ್ನೆ ಕೇಳಿದಾಗ ಹೈಕೋರ್ಟ್ ತೀರ್ಮಾನವಾಗಿದೆ. ಎಂದರು. ಹೈಕೋರ್ಟಿನ ತೀರ್ಮಾನದ ಪ್ರಕಾರ 50 ಪರ್ಸೆಂಟ್ ಸ್ಥಳೀಯ ಅಭ್ಯರ್ಥಿಗಳನ್ನು ತೆಗೆದುಕೊಳ್ಳಬೇಕೆಂದು ಇದೆ. ಆ ತೀರ್ಮಾನ ಇವರಿಗೆ ಅನ್ವಯಿಸುವುದಿಲ್ಲ. ಇವರಿಗೆ ಅದು ಅನ್ವಯಿಸಿದರೆ 7 ಸಾವಿರ ಜನರ ಪೈಕಿ 3500 ಜನರಿಗೆ ಕೆಲಸ ಸಿಗುತ್ತದೆ ದಯವಿಟ್ಟು ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್.— ನಾನು ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

ಅಧ್ಯಕ್ಷರು.— ನನ್ನ ಕಷ್ಟವನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಿ.

ಶ್ರೀ ಎಂ ಎಸ್. ಕೃಷ್ಣನ್.— ನನ್ನ ಕಷ್ಟವನ್ನೂ ಸಹ ತಾವು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು. ನಾನು ಬಹಳ ಕಳಕಳಿಯಿಂದ ಈ ಪ್ರಶ್ನೆಯನ್ನು ಕಳುಹಿಸಿದ್ದೇನೆ. ಮತ್ತು ಮಂತ್ರಿಗಳು ಕೂಡ ಬಹಳ ಎಚ್ಚರಿಕೆಯಿಂದ ಉತ್ತರಿಸುತ್ತಾರೆಂದು ಭಾವಿಸಿದ್ದೆ. ಆದರೆ ಮಂತ್ರಿಗಳಿಗೆ ಇದರ ಬಗ್ಗೆ ಎಚ್ಚರಿಕೆ ಇದ್ದ ಹಾಗೆ ಕಾಣುವುದಿಲ್ಲ. 7 ಸಾವಿರ ಮಂದಿ ಶಿಕ್ಷಕರು ತೊಂದರೆಯಲ್ಲಿದ್ದಾರೆ. ಅವರನ್ನು ಖಾಯಂ ಮಾಡದಿದ್ದರೆ ನಾಳೆ ದಿವಸ ಅಜಿಟೇಷನ್ ಜಾಸ್ತಿಯಾಗುತ್ತದೆ. ಇದಕ್ಕೆ ಏಕೆ ಅವಕಾಶ ಕೊಡಬೇಕು?

ಶ್ರೀ ರಾಮಕೃಷ್ಣ ಹೆಗಡೆ.— ವಿದ್ಯಾ ಮಂತ್ರಿಗಳು ಮೇಲ್ಮನೆಗೆ ಹೋಗಿದ್ದಾರೆ. ಅವರು ಹೋಗುವುದಕ್ಕೆ ಮೊದಲು, ಅಲ್ಲಿ ಪ್ರಶ್ನೆ ಇದೆ, ಅಲ್ಲಿಗೆ ಹೋಗಲೇಬೇಕು ಎಂದು ಕೇಳಿದರು. ಆಗ ನಾನು

ಹೋಗಿ ಎಂದು ಹೇಳಿದೆ. ಬೇಜವಾಬ್ದಾರಿತನವನ್ನೇನೂ ಅವರು ತೋರಿಸಿಲ್ಲವೆಂದು ಹೇಳಬಯಸುತ್ತೇನೆ. ಮಾನ್ಯ ಕೃಷ್ಣನ್‌ರವರು ಎತ್ತಿದಂತಹ ಪ್ರಶ್ನೆ ಸೂಕ್ತವಾದುದಾಗಿದೆ. ಅವರ ಸಮಸ್ಯೆ ಬಗ್ಗೆ ಸಂಪೂರ್ಣ ಸಹಾನುಭೂತಿ ಇದೆ. ಇವರನ್ನು ನೇಮಕಾತಿ ಮಾಡುವಾಗ ರಿಸರ್ವೇಷನ್ ರೂಲ್ಸ್ ಪ್ರಕಾರ ಮಾಡಿದ್ದೇವೆ. ರೋಸ್ಟರನ್ನು ಅನುಸರಿಸಿದ್ದೇವೆ. ಆದರೆ ಅವರನ್ನು ಲೋಕಲ್ ಕ್ಯಾಂಡಿಡೇಟ್ಸ್ ಎಂದು ಕರೆದಿದ್ದೇವೆ ಅಷ್ಟೆ. ಹೈಕೋರ್ಟಿನ ತೀರ್ಮಾನದ ಪ್ರಕಾರ ಲೋಕಲ್ ಕ್ಯಾಂಡಿಡೇಟ್ಸ್ ಅನ್ನು ನೇಮಿಸಬಾರದೆಂದು ಇದೆ. ಅದು ಒಂದೇ ತೊಂದರೆ ಇರುವುದು. ಹೈಕೋರ್ಟ್ ತೀರ್ಮಾನಕ್ಕೆ ವಿರುದ್ಧವಾಗಿ ಮಾಡಿದರೆ ಹೈಕೋರ್ಟಿಗೆ ಕಂಟಿಪ್ಟ್ ಆಗುತ್ತದೆ. ಅಥವಾ ಬೇರೆ ಯಾರಾದರೂ ಹೈಕೋರ್ಟಿಗೆ ಹೋಗಬಹುದು. ಇದನ್ನು ಕಾನೂನು ಮಂತ್ರಿಗಳು ವಿಚಾರ ಮಾಡಬೇಕು. ಇದನ್ನು ಪರೀಕ್ಷೆ ಮಾಡಿಸಿ ಎಂದು ನಾನು ಅವರಿಗೆ ಹೇಳಿದ್ದೇನೆ. ಸರ್ಕಾರದ ದೃಷ್ಟಿಯಿಂದ 5-6 ಸಾವಿರ ಜನ ಶಿಕ್ಷಕರು ಏನಿದ್ದಾರೆ ಅವರಿಗೆ ಅರ್ಹತೆ ಇದ್ದು ಉದ್ಯೋಗ ವಿನಿಮಯ ಕೇಂದ್ರದಿಂದ ಹೆಸರು ತರಿಸಿಕೊಂಡಿದ್ದಾರೆ. ರಿಸರ್ವೇಷನ್ ರೂಲ್ಸನ್ನು ಸಂಪೂರ್ಣವಾಗಿ ಫಾಲೋ ಮಾಡಿದ್ದಾರೆ ಆದ್ದರಿಂದ, ಅವರ ನೇಮಕಾತಿಯಲ್ಲಿ ಯಾವುದೇ ನ್ಯೂನತೆ ಇಲ್ಲ. ಆದರೆ ಒಂದೇ ಒಂದು ಸಮಸ್ಯೆ ಏನೆಂದರೆ, ಅವರನ್ನು ರೆಗ್ಯುಲರ್ ಆಗಿ ಅಪಾಯ್ಟಿಂಟ್ ಮಾಡಿಕೊಂಡಿದ್ದರೆ ಚೆನ್ನಾಗಿತ್ತು. ಅದನ್ನು ಮಾಡದೆ ಲೋಕಲ್ ಕ್ಯಾಂಡಿಡೇಟ್ಸ್ ಎಂದು ಮಾಡಿರುವುದರಿಂದ ತೊಂದರೆ ಆಗಿದೆ.

ಶ್ರೀ ಎಂ ಎಸ್. ಕೃಷ್ಣನ್.— ಅವರಿಗೆ ವಿಶೇಷವಾಗಿ ಏನಾದರೂ ಮಾಡಬೇಕೆಂಬ ಅಭಿಪ್ರಾಯವನ್ನು ಇಲಾಖೆಯವರು ಕೊಟ್ಟಿದ್ದಾರೆಂದು ತಿಳಿದು ಬಂದಿದೆ. ದಯವಿಟ್ಟು ಇದನ್ನು ಪುನರ್‌ಪರಿಶೀಲನೆ ಮಾಡಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.— ಮಾಡಿಸುತ್ತೇನೆಂದು ಹೇಳಿದರಲ್ಲ.

ಶ್ರೀ ಎಂ.ಎಸ್. ಕೃಷ್ಣನ್.— ನಾಲ್ಕು ಸಾವಿರ ಜನರಿಗೆ ಮಾತ್ರ ಕೆಲಸ ಸಿಕ್ಕಿ ಬೇರೆಯವರಿಗೆ ಸಿಗದಿದ್ದರೆ ಅವರನ್ನು ಹಾಗೆಯೇ ಮುಂದುವರಿಸುತ್ತೇವೆಂದಾದರೂ ಹೇಳಲಿ ಎಂದು ಕೇಳಿಕೊಳ್ಳುತ್ತೇನೆ. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ?

ಶ್ರೀ ರಾಮಕೃಷ್ಣ ಹೆಗಡೆ.—ಅವರ ಸೇವೆಯನ್ನು ಇಷ್ಟಕ್ಕೆ ಮುಕ್ತಾಯ ಮಾಡಬೇಕೆಂದು ಎಲ್ಲಿಯೂ ಮಾಡಿಲ್ಲ. ಇವತ್ತು ಸಂಜೆ ಕ್ಯಾಬಿನೆಟ್ ಮೀಟಿಂಗ್ ಇದೆ. ಅಲ್ಲಿ ಈ ವಿಚಾರವನ್ನು ಚರ್ಚಿಸಿ ಯಾವ ರೀತಿ ಮಾಡಿಸುವುದಕ್ಕೆ ಬರುತ್ತದೆ ಆ ರೀತಿ ಮಾಡಿಸುತ್ತೇನೆ.

ಶ್ರೀ ಎಸ್. ನಂಜಪ್ಪ.—ದಿನಾಂಕ 20-1-1984ರಂದು ಚುಂಚನಕಟ್ಟೆಯಲ್ಲಿರುವ ಚಿತ್ರಮಂದಿರಕ್ಕೆ ದುಷ್ಕರ್ಮಿಗಳು ಪೂರ್ವಯೋಜಿತರಾಗಿ ಪೆಟ್ರೋಲ್, ಲಾರಿ ಎಲ್ಲ ತೆಗೆದುಕೊಂಡು ಬಂದು ಸಿನೇಮಾ ನೋಡುತ್ತಿದ್ದ ಪ್ರೇಕ್ಷಕರನ್ನು ಗಲಾಟೆ ಮಾಡಿ ಓಡಿಸಿ ಚಿತ್ರಮಂದಿರಕ್ಕೆ ಬೆಂಕಿ ಹಚ್ಚಿ ಸುಮಾರು ಒಂದುವರೆ ಲಕ್ಷ ರೂಪಾಯಿ ನಷ್ಟ ಮಾಡಿದ್ದಾರೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಆ ಬಗ್ಗೆ ವಿಚಾರ ಮಾಡಿ ಮಾನ್ಯ ಸದಸ್ಯರಿಗೆ ವಿಷಯ ತಿಳಿಸುತ್ತೇನೆ.

ಶ್ರೀ ಬಿ. ಗಂಗಣ್ಣ.— ಆ ವಿಚಾರ ಏನು ಎಂದು ಹೇಳಬೇಕು.

ಅಧ್ಯಕ್ಷರು.— ಆ ಬಗ್ಗೆ ಈಗಾಗಲೇ ಮಂತ್ರಿಗಳು ಹೇಳಿದ್ದಾರೆ; ಇನ್ನೂ ಹೆಚ್ಚು ಪ್ರಸ್ತಾಪ ಮಾಡಬೇಕೆಂದರೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಮಾತನಾಡಿ.

ಅಧ್ಯಕ್ಷರು.— ದಯಮಾಡಿ ಕುಳಿತುಕೊಳ್ಳಿ; ಧರ್ಮಸಿಂಗರೇ ಏತಕ್ಕೆ ಎದ್ದಿರಿ? ತಮ್ಮನ್ನು ನಾನು ನಿನ್ನೆ ಕರೆದಾಗ ಇರಲಿಲ್ಲ. ಪುನಃ ಇವತ್ತು ಕಳುಹಿಸಿದ್ದೀರಿ.

ಶ್ರೀ ಪಿ. ರಾಮದೇವ್.— ಆಮೇಲಾದರೂ ಅವಕಾಶ ಕೊಡಿ.

ಅಧ್ಯಕ್ಷರು.— ಪ್ರತಿಯೊಬ್ಬ ಸದಸ್ಯರನ್ನೂ ಸಭೆಯು ಕಾಯುವುದಕ್ಕಾಗುವುದಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—(ಸದಸ್ಯರು ಹಾಜರಿರಲಿಲ್ಲ)

ಶ್ರೀ ಜಿ.ಎಸ್. ಬಸವರಾಜು. — (ಸದಸ್ಯರು ಹಾಜರಿರಲಿಲ್ಲ)

ಶ್ರೀ ಎಂ. ಆನಂದರಾವ್.— ಡಿ.ಎಲ್.ಆರ್.ಸಿ. ಮೂಲಕ ಪ್ರಾಥಮಿಕ ಶಾಲಾ ಉಪಾಧ್ಯಾಯರನ್ನು ಆಯ್ಕೆ ಮಾಡಬೇಕಾದರೆ ಮೆರಿಟ್ ಮೇಲೆ ಕನ್ಸಿಡರ್ ಮಾಡಬೇಕೆಂದು ಸರ್ಕಾರ ಆರ್ಡ್ಲ್ಸ್ ಮಾಡಿದೆ. ಆದರೆ 1980-81ರಲ್ಲಿ ಟಿ.ಸಿ.ಹೆಚ್. ಪಡೆದ 100 ಜನ ಅಭ್ಯರ್ಥಿಗಳಿಗೆ ಶಿವಮೊಗ್ಗ ಡಿ.ಎಲ್.ಆರ್.ಸಿ.ಯಲ್ಲಿ ಅನ್ಯಾಯವಾಗಿದೆ. ಇದನ್ನು ಸರಿಪಡಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ. ಮತ್ತು ಮನವಿ ಪತ್ರ ಒಂದನ್ನು ಕೂಡ ಸರ್ಕಾರಕ್ಕೆ ಕಳುಹಿಸಿ ಕೊಡುತ್ತೇನೆ.

ಶ್ರೀ ಲಕ್ಷ್ಮೀಸಾಗರ್.— ಕೊಡಿ ನೋಡುತ್ತೇನೆ.

ಶ್ರೀ ಪ್ರತಾಪ ಚಂದ್ರ ಶೆಟ್ಟಿ.— ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟ ಸುಮಾರು 12 ಕಾಲೇಜುಗಳ 10 ಸಾವಿರ ಮಂದಿ ಇಂಜನಿಯರಿಂಗ್ ವಿದ್ಯಾರ್ಥಿಗಳು ತಮ್ಮ ಹತ್ತು ಬೇಡಿಕೆಗಳನ್ನು ಸರ್ಕಾರದ ಮಂದಿಟ್ಟು ಜನವರಿ 16ರಂದು ಮುಷ್ಕರ ಪ್ರಾರಂಭಿಸಿದ್ದಾರೆ. ಅವರು ತಮ್ಮ ಮನವಿಯನ್ನು ಡಿಸೆಂಬರ್ 30ರಂದು ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ, ವೈಸ್ ಚಾನ್ಸಲರಿಗೆ ಹಾಗೂ

ಸರ್ಕಾರದ ವಿದ್ಯಾ ಸಚಿವರಿಗೆ ಮತ್ತು ಮುಖ್ಯಮಂತ್ರಿಗಳಿಗೆ ಸಲ್ಲಿಸಿದ್ದಾರೆ. ಆದರೆ ವಿಶ್ವವಿದ್ಯಾನಿಲಯದವರು ಆ ಬಗ್ಗೆ ಇದುವರೆಗೆ ಯಾವ ಒಂದು ಕಾರ್ಯಕ್ರಮವನ್ನೂ ಕೈಗೊಳ್ಳಲಿಲ್ಲ. ಅದೇ ರೀತಿಯಲ್ಲಿ ಸರ್ಕಾರದವರು ಈವರೆಗೆ ಮಧ್ಯಪ್ರವೇಶ ಮಾಡಲಿಲ್ಲ. ಆದರೆ ಇಂದು ಈ ವಿದ್ಯಾರ್ಥಿಗಳು ಇನ್ನೊಂದು ಪಂತಕ್ಕೆ ಹೋಗಿ ಸರದಿ ಉಪವಾಸ ಸತ್ಯಾಗ್ರಹದ ಮೂಲಕ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಅದಕ್ಕೂ ಸಹ ಯಾವ ಒಂದು ಸಮರ್ಪಕವಾದ ಉತ್ತರ ದೊರೆಯಲಿಲ್ಲ. ಆದ್ದರಿಂದ, ಇಂದು ಅವರು ಆಮರಣಾಂತ ಉಪವಾಸವನ್ನು ಕೈಗೊಂಡಿದ್ದಾರೆ. ಇನ್ನು ಸರ್ಕಾರದವರಾಗಲಿ, ವಿಶ್ವವಿದ್ಯಾನಿಲಯದವರಾಗಲಿ ಈ ಬಗ್ಗೆ ಏನು ಒಂದು ಕ್ರಮವನ್ನು ಕೈಗೊಳ್ಳಲಿಲ್ಲ. ಈ ದಿಸೆಯಲ್ಲಿ ವಿದ್ಯಾರ್ಥಿ ಮುಖಂಡರನ್ನು ಬಂಧಿಸಿ ಪೋಲೀಸರಿಂದ ಹಿಂಸಿಸಿದ್ದಾರೆ. ಸಿದ್ಧಗಂಗಾ ಇಂಜನಿಯರಿಂಗ್ ಕಾಲೇಜಿನ 340 ವಿದ್ಯಾರ್ಥಿಗಳನ್ನು ಸಸ್ಪೆನ್‌ಷನ್‌ನಲ್ಲಿಟ್ಟಿದ್ದಾರೆ. 6 ಜನರು ಆಸ್ಪತ್ರೆ ಸೇರಿದ್ದಾರೆ. ಈ ಒಂದು ಪರಿಸ್ಥಿತಿ ಉದ್ಭವವಾಗಿರುವುದರಿಂದ ಸರ್ಕಾರವಾಗಲೀ ಅಥವಾ ವಿಶ್ವವಿದ್ಯಾನಿಲಯದವರಾಗಲೀ ಮಧ್ಯೆ ಪ್ರವೇಶಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು — ಭಾಷಣ ಮಾಡುತ್ತಾ ಹೋಗುವುದಕ್ಕಾಗುವುದಿಲ್ಲ

ಶ್ರೀ ಪ್ರತಾಪ ಚಂದ್ರಶೆಟ್ಟಿ.— ವಿಷಯವನ್ನು ಹೇಳಬೇಕೆ ಅಥವಾ ಕುಳಿತುಕೊಳ್ಳಬೇಕೆ?

ಅಧ್ಯಕ್ಷರು.— ರೂಲ್ 134ರಲ್ಲಿ ಏನು ಹೇಳಿದೆ ಆ ಪ್ರಕಾರ ಮಾಡುವುದು.

ಶ್ರೀ ಎ. ಲಕ್ಷ್ಮೀಸಾಗರ್. — ಇದರ ಬಗ್ಗೆ ವಿದ್ಯಾರ್ಥಿ ಮುಖಂಡರು ಕೆಲವರು ಬಂದು ವಿದ್ಯಾ ಮಂತ್ರಿಗಳನ್ನು ಭೇಟಿ ಮಾಡಿ ತಮ್ಮ ಬೇಡಿಕೆಗಳನ್ನು ಅವರ ಮುಂದಿಟ್ಟಿದ್ದಾರೆ. ಇದು ಅವರು ಇಟ್ಟಿರತಕ್ಕ ಬೇಡಿಕೆ. ಇದು ವಿಶ್ವವಿದ್ಯಾನಿಲಯದ ಆಟಾನಮಿ ವ್ಯಾಪ್ತಿಯಲ್ಲಿ ಬರುತ್ತದೆ. ಇದರಲ್ಲಿ ಸರ್ಕಾರ ಪ್ರವೇಶ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೂ ಕೂಡಾ ಮಾನ್ಯ ವಿದ್ಯಾಮಂತ್ರಿಗಳು ತಜ್ಞರ ಒಂದು ಸಮಿತಿಯನ್ನು ಮಾಡಿ 15ದಿವಸಗಳಲ್ಲಿ ಆ ಬೇಡಿಕೆಗಳನ್ನು ನೀವು ಪರಿಶೀಲಿಸಬೇಕೆಂದೂ ಆ ಬಗ್ಗೆ ವರದಿಯನ್ನು ಕೊಡಬೇಕೆಂದು ಹೇಳಿ ನಿರ್ದೇಶನ ಕೊಟ್ಟಿದ್ದಾರೆ. ಆ ವರದಿ ಬಂದ ಮೇಲೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುವ ಬಗ್ಗೆ ಪರಿಶೀಲನೆ ಮಾಡುತ್ತದೆಂದು ತಿಳಿಸುತ್ತೇನೆ

ಶ್ರೀ ಆರ್.ಎನ್. ನಾಯಕ್.— ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಶರಾವತಿ ನದಿ ಹರಿಯುತ್ತಿದ್ದು ಅದರಲ್ಲಿ ಸಿಹಿ ನೀರು ಹರಿಯುತ್ತಿದ್ದು ಅದರ ಸುತ್ತಮುತ್ತ ಫಲವತ್ತಾದ ಭೂಮಿ ಇರುತ್ತದೆ ಆದರೆ ಅಲ್ಲಿಗೆ ನೀರು ಸಿಗುತ್ತಿಲ್ಲ. ಇಲ್ಲಿ ಅದಷ್ಟು ಬೇಗ ಏತ ನೀರಾವರಿಯನ್ನು ಒದಗಿಸುವ ಬಗ್ಗೆ.....

ಅಧ್ಯಕ್ಷರು.— ಇದು ದೀರ್ಘ ಚರ್ಚಾಸ್ಪದ ವಿಷಯ. 334ನೇ ನಿಯಮದ ಕೆಳಗೆ ತಕ್ಷಣ ಉತ್ತರ ಸಿಗುವುದಿದ್ದರೆ ಆದು ಸಿಗುತ್ತದೆ. ಇಡಿ ಶರಾವತಿ ನದಿಯನ್ನು ನೀರಾವರಿಗೆ ಒಳಪಡಿಸಿ ಅದರಿಂದ ವಿದ್ಯುತ್ ಪಡೆಯುವ ವಿಷಯದ ಬಗ್ಗೆ ತಾವು ಹೇಳುತ್ತಿದ್ದೀರಿ. ಈ ಬಗ್ಗೆ ಅರ್ಧಗಂಟೆ ಚರ್ಚೆ ಮಾಡ ಬೇಕೆಂದರೆ ಆ ಬಗ್ಗೆ ಬರೆದು ಕಳುಹಿಸಿ

ಶ್ರೀ ಆರ್. ಎನ್. ನಾಯಕ್.— ಬೇಡ, ನನಗೆ ಎರಡು ನಿಮಿಷ ಸಾಕು. ನಾನು 22-3-1983ರಂದು ಒಂದು ಅರ್ಜಿಯನ್ನು ಸಂಬಂಧಪಟ್ಟವರಿಗೆ ಕೊಟ್ಟಿದ್ದೇನೆ. ಮಂಕಿ ಗ್ರಾಮ ಮತ್ತು ಉಳಿದ ಗ್ರಾಮ ಗಳನ್ನು ನೀರಾವರಿಗೆ ಒಳಪಡಿಸುವ ಬಗ್ಗೆ ಸರ್ವೆ ಮಾಡಿ ಎಂದು ಹೇಳಿದ್ದೇನೆ.

ಅಧ್ಯಕ್ಷರು.— ತಾವು ಕೊಟ್ಟ ಅರ್ಜಿಯ ನಕಲನ್ನು ನನಗೆ ಕೊಡಿ.

ಶ್ರೀ ಆರ್.ಎನ್. ನಾಯಕ್.— ನನ್ನ ಅರ್ಜಿಗೆ ನಿನ್ನೆ ತಾನೇ ಉತ್ತರ ಬಂದಿದೆ. ಅದರಲ್ಲಿ ಪರಿಶೀಲಿಸುತ್ತೇನೆ ಎಂದು ಮಾತ್ರ ಇದೆ. ಯಾವಾಗ ಅವರು ಪರಿಶೀಲನೆ ಮಾಡುತ್ತಾರೆ?

ಶ್ರೀ ಎ. ಲಕ್ಷ್ಮೀಸಾಗರ್.— ಈ ವಿಷಯದ ಬಗ್ಗೆ ಸಾದುವಾದ ಉತ್ತರವನ್ನು ಒಗಿಸಿಕೊಡುವ ಬಗ್ಗೆ ನಾನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ.

ಶ್ರೀ ಆರ್.ಎನ್. ನಾಯಕ್.— ಈ ಬಗ್ಗೆ ಮಾನ್ಯ ಬಸವಣ್ಣಪ್ಪನವರೂ ಹೇಳಿದ್ದಾರೆ. ಆದರೂ ಸಹಾ ಅಲ್ಲಿನ ಅಧಿಕಾರಿಗಳು ಏನೂ ಕೆಲಸ ಮಾಡಿಲ್ಲ

ಶ್ರೀ ಜೆ.ಡಿ. ಸೋಮಪ್ಪ.— ಮಾನ್ಯ ಅಧ್ಯಕ್ಷರೇ, ಹಾಸನದಲ್ಲಿ 26ನೇ ತಾರೀಖಿನಿಂದ ಅಲ್ಲಿನ ಅಕ್ಕಿ ಗಿರಣಿ ಮಾಲೀಕರು ಮುಷ್ಕರ ಹೂಡಿರುವುದರಿಂದ ಅಲ್ಲಿನ ಸಣ್ಣ ಹಾಗೂ ಅತಿ ಸಣ್ಣ ರೈತರು ಅಕ್ಕಿ ಮಾರುವುದಕ್ಕಾಗುತ್ತಾ ಇಲ್ಲ. ಇವತ್ತು ಅಲ್ಲಿ ಅಕ್ಕಿ ಸಿಗದೇ ಅಕ್ಕಿ ಬೆಲೆ ಬಜಾರಿನಲ್ಲಿ 5ರೂಪಾಯಿ ಆಗಿದೆ. ಮಾನ್ಯ ಆಹಾರ ಮಂತ್ರಿಗಳು ಈ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದಾರೆ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಹಾಸನ ಜಿಲ್ಲೆಯ ಮಿಲ್ ಮಾಲೀಕರು ಲೆವಿ ಪ್ರಮಾಣ ಜಾಸ್ತಿ ಆಗಿದೆ ಎಂದು ಹೇಳಿ ಮುಷ್ಕರ ಮಾಡಿದ್ದಾರೆ. ಈ ಬಗ್ಗೆ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಪುಟ್ಟಸ್ವಾಮಿಗೌಡರ ನಾಯಕತ್ವದಲ್ಲಿ ನಮ್ಮಾರು 1 ಗಂಟೆ ಕಾಲ ಕುಳಿತು ಚರ್ಚೆ ಮಾಡಿ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಹಾಗೂ ಅವರು ಮುಷ್ಕರವನ್ನು ವಾಪಸ್ ತೆಗೆದುಕೊಂಡಿದ್ದಾರೆ.

ಶ್ರೀ ಕಾಳಮರಿಗೌಡ.— ಇದು ಒಂದು ತಾಲ್ಲೂಕಿಗೆ ಸೀಮಿತವಾದ ಪ್ರಶ್ನೆ ಅಲ್ಲ. ಇಡೀ ರಾಜ್ಯದಲ್ಲಿ ಇರುವ ಪ್ರಶ್ನೆ.

ಶ್ರೀ ಜೆ.ಡಿ. ಸೋಮಪ್ಪ.— ಮಾನ್ಯ ಮಂತ್ರಿಗಳು ಏನು ಹೇಳಿದ್ದಾರೆ ಅದು ಶುದ್ಧ ಸುಳ್ಳು. ಈ ಒಂದು ಸಮಸ್ಯೆ ಇನ್ನೂ ಬಗೆಹರಿದಿಲ್ಲ. ಆಸಿದ್ದಿಷ್ಟ ಕಾಲ ಅವರು ಮುಷ್ಕರವನ್ನು ಮುಂದುವರಿಸುತ್ತೇವೆಂದು ಹೇಳಿದ್ದಾರೆ. ಅಲ್ಲಿ ಕೇವಲ ಒಂದೇ ಒಂದು ಸರ್ಕಾರಿ ಮಿಲ್ ಇದ್ದು ಅಲ್ಲಿ ಅಕ್ಕಿ ಪಡೆಯ ಬೇಕಾದರೆ ಅದೇನೋ ಕೂಪನ್ ಪಡೆದುಕೊಳ್ಳಬೇಕೆಂದು ಹೇಳಿದ್ದಾರೆ. ಅಲ್ಲಿನ ಜನರ ಕಷ್ಟ ಸುಖಗಳನ್ನು ನೋಡಬೇಕು.

ಶ್ರೀ ಧರ್ಮಸಿಂಗ್.— ಅಧ್ಯಕ್ಷರೇ, ಹೈಕೋರ್ಟಿನ ಶಾಖೆ ಗುಲ್ಬರ್ಗಾದಲ್ಲಿ ಆಗಬೇಕೆಂದು ಗುಲ್ಬರ್ಗಾದ ಬಾರ್ ಅಸೋಸಿಯೇಷನ್‌ನವರು ರೆಪ್ರೆಸೆಂಟ್ ಮಾಡಿದ್ದಾರೆ. ಅಲ್ಲಿ ಒಂದು ಶಾಖೆ ಮಾಡುವುದರಿಂದ ಗುಲ್ಬರ್ಗಾ, ಬೀದರ್, ರಾಯಚೂರು ಹಾಗೂ ಬಿಜಾಪುರ ಜಿಲ್ಲೆಯಿಂದ ಬರುವ ಜನರಿಗೆ ಅನುಕೂಲವಾಗುತ್ತದೆ. ಬೆಂಗಳೂರಿನಿಂದ 600 ಕಿ.ಮೀ. ದೂರದಲ್ಲಿರುವ ಗುಲ್ಬರ್ಗಾದಲ್ಲಿ ಬ್ರಾಂಚ್ ಆಗಬೇಕೆಂದು ಜಸ್ವಂತ್ ಸಿಂಗ್ ಅವರ ಸಮಿತಿ ಬಂದಾಗ ಅವರಿಗೆ ತಾವು ರಾಜ್ಯ ಸರ್ಕಾರದ ಮುಖಾಂತರ ಒತ್ತಾಯ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರ ಅಭಿಪ್ರಾಯವನ್ನು ಆ ಸಮಿತಿಯ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಧರ್ಮಸಿಂಗ್.— ಅಲ್ಲಿ ಮಾಡಲೇಬೇಕೆಂದು ಸರ್ಕಾರ ಹೇಳಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.— ಅಧ್ಯಕ್ಷರೇ, ಹೈಕೋರ್ಟಿನ ಶಾಖೆಯನ್ನು ಗುಲ್ಬರ್ಗಾದಲ್ಲಿ ಮಾಡ ಬೇಕೆಂದು ಅಲ್ಲಿಯ ವಕೀಲ ಸದಸ್ಯರು ಹೇಳುತ್ತಾರೆ. ಬೆಳಗಾಂನಲ್ಲಿ ಆಗಬೇಕೆಂದು ಅಲ್ಲಿನ ಸದಸ್ಯರು ಹೇಳುತ್ತಾರೆ. ಹುಬ್ಬಳ್ಳಿ-ಧಾರವಾಡದವರು ನಮ್ಮಲ್ಲಿ ಅದು ಆಗಬೇಕೆಂದು ಹೇಳುತ್ತಾರೆ. ಈ ರೀತಿಯ ಸಮಸ್ಯೆಗಳು ಕೇಂದ್ರ ಸರ್ಕಾರದ ಮುಂದೆ ಬೇರೆ ಬೇರೆ ರಾಜ್ಯಗಳಿಂದ ಬಂದ ಕಾರಣ ಇವನ್ನು ಸಮಗ್ರ ವಾಗಿ ವಿಚಾರ ಮಾಡಿ ವರದಿ ಸಲ್ಲಿಸಬೇಕೆಂದು ಜಸ್ವಂತ್‌ಸಿಂಗ್ ಅವರ ಸಮಿತಿ ನೇಮಕ ಮಾಡಿದ್ದು ಅವರು ನಮ್ಮ ರಾಜ್ಯಕ್ಕೂ ಬರುವವರಿದ್ದಾರೆ. ನಾವು ಮಾನ್ಯ ಸದಸ್ಯರ ಅಭಿಪ್ರಾಯವನ್ನು ಅವರ ಮುಂದೆ ಇಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇನೆ. ಅದಕ್ಕಿಂತಲೂ ಹೆಚ್ಚಾಗಿ ನಾವು ಏನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಧರ್ಮಸಿಂಗ್.- ತಾವು ಬೆಳಗಾಂನಲ್ಲಿ ಆಗಬೇಕು ಎಂದು ಹೇಳುತ್ತೀರೋ ಅಥವಾ ಹುಬ್ಬಳ್ಳಿ ಯಲ್ಲಿ, ಗುಲ್ಬರ್ಗಾದಲ್ಲಿ ಆಗಬೇಕೆಂದು ಹೇಳುತ್ತೀರೋ?

ಅಧ್ಯಕ್ಷರು.— ಮಾನ್ಯ ಮಾದೇಗೌಡರೇ ತಾವು ಕಳುಹಿಸಿದ ನೋಟೀಸ್ ವಿಚಾರವಾಗಿ ಕಳೆದ ಐದಾರು ದಿನಗಳಿಂದಲೂ ಸದನದಲ್ಲಿ ಚರ್ಚೆ ಆಗಿದೆ.

ಶ್ರೀ ಜಿ. ಮಾದೇಗೌಡ.— ಅಧ್ಯಕ್ಷರೇ, ಕಳೆದ 5-6 ದಿವಸಗಳಲ್ಲಿ ಇದು ಸದನದಲ್ಲಿ ಚರ್ಚೆಯಾಗಿರ ತಕ್ಕದ್ದು ನನಗೆ ತಿಳಿದಿದೆ. ಆದರೆ ಆ ಜನರಿಗೆ ಯಾವ ರೀತಿಯ ಪರಿಹಾರವೂ ಸಿಕ್ಕಿಲ್ಲ. ಸರ್ಕಾರ ಕೊಟ್ಟಿರತಕ್ಕ ಉತ್ತರ ಹಾಗೂ ಮತ್ತೆ ಹೊರಗಡೆ ನಡೆಯುತ್ತಿರತಕ್ಕದ್ದು ಏನು ಎಂಬುದು ತಮಗೂ ಗೊತ್ತಿದೆ. ನಿವ್ ಜಿಲ್ಲೆಯಲ್ಲಿ ಪ್ರಬಲವಾಗಿ ಚಳುವಳಿ ನಡೆಯುತ್ತಿದೆ. ಬೆಂಗಳೂರು, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಚಳುವಳಿ ತೀವ್ರವಾಗಿದ್ದು ರೈಲು, ಬಸ್ ಸಂಚಾರ ನಿಂತಿದೆ. ಇವತ್ತು ಜನರು ತಿರುಗಾಡುವ ಸ್ಥಿತಿಯಲ್ಲಿ ಇಲ್ಲ. ಇವೆಲ್ಲಕ್ಕಿಂತಲೂ ನಾಚಿಕೆಗೇಡಿನ ಪರಿಸ್ಥಿತಿ ಎಂದರೆ ಪೊನ್ನೆ ರಿಪಬ್ಲಿಕ್ ಡೇಗೆ ಹಳ್ಳಿಗೆ ಹೋಗಿದ್ದ ನಾವು ಅಲ್ಲಿಂದ ಈ ಶಾಸನ ಸಭೆಗೆ ಬರಬೇಕಾದರೆ ನಾವು ಕದ್ದು ಬರ ಬೇಕಾಯಿತು. ರೈಲು ಸಂಚಾರ, ಕಾರು ಸಂಚಾರ, ಬಸ್ ಸಂಚಾರ ಇಲ್ಲದೇ ಶಾಸಕರು ಈ ಸಭೆಗೆ ಹೇಗೆ ಬಂದರೋ ನನಗೆ ಗೊತ್ತಿಲ್ಲ. ಆದ್ದರಿಂದ ಈ ವಿಷಯವನ್ನು ನಾಳೆ ಪ್ರಸ್ತಾಪಕ್ಕೆ ತೆಗೆದುಕೊಂಡು ಖಚಿತವಾದ ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ. ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು ರೈತ ಸಂಘದವರನ್ನು ಮಾತುಕತೆಗೆ ಕರೆದಿದ್ದೇವೆಂದು ಹೇಳಿದ್ದಾರೆ ಆದರೆ ರೈತ ಸಂಘದ ಅಧ್ಯಕ್ಷರು ನಮ್ಮ ಡಿಮಾಂಡ್‌ಗಳು ಏನಿವೆ ಅವುಗಳು ತೀರ್ಮಾನ ಆಗುವವರೆಗೆ ನಾವು ಮಾತುಕತೆಗೆ ತಯಾರಿಲ್ಲವೆಂದು ಹೇಳಿದ್ದಾರೆ. ಇವತ್ತು ದೇಶದಲ್ಲಿ ಉಗ್ರವಾದ ಪರಿಸ್ಥಿತಿ ಉಂಟಾಗಿದೆ. ರೈತ ಸಂಘದ ಬೇಡಿಕೆಗಳು ಈಡೇರದಿದ್ದರೆ ನಮ್ಮ ಜಿಲ್ಲೆಯ ವಿದ್ಯಾರ್ಥಿ ಸಂಘದವರೂ ಕೂಡಾ ಈ ಚಳುವಳಿಯಲ್ಲಿ ಧ್ವನಿಗೂಡಿಸು ವುದಾಗಿ ಹೇಳಿದ್ದಾರೆ ಕನ್ನಡ ಭಾಷೆ ಬಗ್ಗೆ ಸರ್ಕಾರದವರು ಏನೂ ತೀರ್ಮಾನ ತೆಗೆದುಕೊಂಡಿಲ್ಲ ವಾದ್ದರಿಂದ ರಾಜ್‌ಕುಮಾರ್ ಅಭಿಮಾನಿಗಳ ಸಂಘದವರೂ ಕೂಡಾ ಚಳುವಳಿ ಮಾಡುತ್ತೇವೆಂದು ಹೇಳಿದ್ದಾರೆ ದೇಶವನ್ನು ತಾವು ಎಲ್ಲಿಯವರೆಗೆ ಕೊಂಡೊಯ್ಯುತ್ತೀರಿ?

ಅಧ್ಯಕ್ಷರು.— ರಾಜ್ಯಪಾಲರ ಭಾಷಣದ ಮೇಲೆ ತಾವು ಮಾತನಾಡುವಾಗ ಇವನ್ನೆಲ್ಲಾ ಪ್ರಸ್ತಾಪ ಮಾಡಿ ಸ್ವಾಮಿ.

ಶ್ರೀ ಜಿ. ಮಾದೇಗೌಡ.— ಇವತ್ತು ಮರ್ಯಾದಸ್ತರು ಬೀದಿಯಲ್ಲಿ ಓಡಾಡುವಂತಿಲ್ಲ. ಊರಿಗೆ

ಹೋಗಿದ್ದ ಸದಸ್ಯರು ಹೇಗೆ ವಾಪಸ್ ಬಂದರೋ ನನಗೆ ಗೊತ್ತಿಲ್ಲ. ಕಳ್ಳರು ಬರುವ ರೀತಿಯಲ್ಲಿ ರಾತ್ರಿ ಹೊತ್ತು ನಾವು ಇಲ್ಲಿಗೆ ಬರಬೇಕಾಗಿದೆ. ಇದು ಶುದ್ಧ ಅವಹೇಳನಕರವಾದ ವಿಚಾರ. ದೇಶದಲ್ಲಿ ಶಾಂತಿಯನ್ನು ಮೂಡಿಸತಕ್ಕ ಒಂದು ವಾತಾವರಣವೇ ಇದೆ ಎಂದು ನಾನು ಕೇಳಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳಿಗೆ ರೈತರ ಬಗ್ಗೆ ಕಳಕಳಿ ಇದೆಯೇ ? ಮೊನ್ನೆ ಮಾನ್ಯ ಸದಸ್ಯರಾದ ಬಂಗಾರಪ್ಪನವರ ಜೊತೆ ಮಾತನಾಡುವಾಗ ತೆಂಗಿನ ಮರ, ಅಡಿಕೆ ಮರ ಹತ್ತುವ ಬಗ್ಗೆ ಹೇಳುತ್ತಿದ್ದರು. ಅಧ್ಯಕ್ಷರೆ, ಇದು ಬಹಳ ಗಂಭೀರ ಪ್ರಶ್ನೆ ಇದೆ, ಅದಕ್ಕೋಸ್ಕರ ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ. ಈ ಸಮಸ್ಯೆ ಬಗೆಹರಿಸುವವರೆಗೂ ನಿರ್ಭೀತಿಯ ವಾತಾವರಣ ಸೃಷ್ಟಿಯಾಗುವವರೆಗೂ ಈ ಸಭೆಯನ್ನು ಮುಂದೂಡಬೇಕು. ರೈತರ ಚಳುವಳಿ ಇದೆ, ಭಾಷಾ ಚಳುವಳಿ ಇದೆ, ಅದನ್ನು ಬಗೆಹರಿಸುವುದಕ್ಕೆ ವಿರೋಧ ಪಕ್ಷದವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಈ ದೇಶವನ್ನು ಸುಭಿಕ್ಷವಾಗಿ, ಈ ದೇಶದ ಜನ ಮಾನಮರ್ಯಾದೆಯಿಂದ ಬದುಕುವುದಕ್ಕೆ ಅವಕಾಶ ಮಾಡಬೇಕೆಂದು ಮಾನ್ಯ ಮಂತ್ರಿಗಳಿಗೆ ಹೇಳಲಿಕ್ಕೆ ಇಷ್ಟ ಪಡುತ್ತೇನೆ. ಇದರ ಬಗ್ಗೆ ಸರ್ಕಾರ ಖಚಿತವಾದಂಥ ಉತ್ತರವನ್ನು ಕೊಡಬೇಕು, ಇಲ್ಲದೇ ಇದ್ದರೆ ಈ ಸಭೆಯನ್ನು ನಡೆಸಲಿಕ್ಕೆ ಬಿಡುವುದಿಲ್ಲ, ತಯಾರಿಲ್ಲ ಎಂದು ಹೇಳುತ್ತೇನೆ. ಜನತೆ ಮರ್ಯಾದೆಯಿಂದ ಬಾಳಬೇಕಾಗುತ್ತದೆ; ಇವೊತ್ತು ಕದ್ದು ಬರಬೇಕಾದ ಪರಿಸ್ಥಿತಿ ಇದೆ. ಏತಕ್ಕೋಸ್ಕರ ಕದ್ದು ಬರಬೇಕು, ಇವರ ಕೈಯಲ್ಲಿ ಆಡಳಿತವನ್ನು ಕೊಟ್ಟು, ಶಾಸಕರಾಗಿ ಕದ್ದು ಬರತಕ್ಕ ಪರಿಸ್ಥಿತಿ ಏತಕ್ಕೆ ಬರಬೇಕು. ಇದು ನಾಚಿಕೆಗೇಡಿನ ಪರಿಸ್ಥಿತಿ

ಶ್ರೀ ಎ. ಲಕ್ಷ್ಮೀ ಸಾಗರ್.— ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಮಾದೇಗೌಡರು ಹೇಳಿರತಕ್ಕ ವಿಚಾರಗಳ ಬಗ್ಗೆ.....

(ಗೊಂದಲ)

ಶ್ರೀ ಧರ್ಮಸಿಂಗ್.— ಅಧ್ಯಕ್ಷರೇ, ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು.— ದಯಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

ಶ್ರೀ ಧರ್ಮಸಿಂಗ್.— ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಮಾದೇಗೌಡರು ಹಳ್ಳಿಯ ಪರಿಸ್ಥಿತಿ ಏನಾಗಿದೆ ಎಂದು ನೋಡಿಕೊಂಡು ಬಂದಿದ್ದಾರೆ.....

ಅಧ್ಯಕ್ಷರು.— ನನಗೆ ಬೇರೆಯವರ ವಕಾಲತ್ತು ಬೇಕಾಗಿಲ್ಲ. ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡಲಿಕ್ಕೆ ನಿಂತಿದ್ದಾರೆ. ಈಗ ಈ ವಿಚಾರದಲ್ಲಿ ಮಾತನಾಡಲೇಬೇಕು ಅಂದರೆ ಬೇರೆ ರೀತಿಯಲ್ಲಿ ತೆಗೆದುಕೊಂಡು ಚರ್ಚೆ ಮಾಡಿ. ಶ್ರೀ ಲಕ್ಷ್ಮೀಸಾಗರ್ ಅವರ ಉತ್ತರ ನಮಗೆ ಬೇಕಾಗಿಲ್ಲ ಅಂದರೆ ಮುಖ್ಯಮಂತ್ರಿಗಳಿವರು ಬರುವವರೆಗೆ ಕಾಯೋಣ.

ಶ್ರೀ ಎ. ಲಕ್ಷ್ಮೀ ಸಾಗರ್ — ಅಧ್ಯಕ್ಷರೆ, ಗಹನವಾದ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸಭೆಯಲ್ಲಿ ದೀರ್ಘವಾದ ಚರ್ಚೆ ನಡೆದಿದೆ. ಮಾನ್ಯ ಸದಸ್ಯರು ನಮಗೆ ಮುಖ್ಯಮಂತ್ರಿಯವರಿಂದ ಉತ್ತರ ಬೇಕು ಅಂದರೆ ಮಾನ್ಯ ಮುಖ್ಯಮಂತ್ರಿಯವರು ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಡುವ ಸಮಯದಲ್ಲಿ ಮಾನ್ಯ ಸದಸ್ಯರಾದ ಮಾದೇಗೌಡರು ಹೇಳಿರತಕ್ಕ ವಿಚಾರಗಳ ಬಗ್ಗೆ ತಿಳಿಸುತ್ತಾರೆ.

ಶ್ರೀ ಜಿ. ಮಾದೇಗೌಡ — ಅಧ್ಯಕ್ಷರೆ, ಇದು ಅಷ್ಟು ಸುಲಭವಾದ ವಿಷಯವಲ್ಲ.

ಅಧ್ಯಕ್ಷರು.— ತಾವು ಇವೊತ್ತು ಬಂದಿದ್ದೀರಿ, ಮೂರು ದಿವಸ ಅದರ ಮೇಲೆ ಚರ್ಚೆಯಾಗಿದೆ.

ಶ್ರೀ ಜಿ. ಮಾದೇಗೌಡ.— ನಾನು ಇವೊತ್ತು ಊರಿಗೆ ಹೋಗಬೇಕಾಗಿದೆ, ನನ್ನನ್ನು ಯಾರು ಕರೆದುಕೊಂಡು ಹೋಗುತ್ತಾರೆ.

(ಗೊಂದಲ)

ಅಧ್ಯಕ್ಷರು.— ಮಾನ್ಯ ಸದಸ್ಯರಾದ ಕೆ. ಮಲ್ಲಪ್ಪನವರು ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುವುದು.

5. ಗಮನ ಸೆಳೆಯುವ ಸೂಚನೆ

ವಿಷಯ : ಹರಿಹರ ಫಾಲಿಫೈಬರಿನಿಂದ ಬಂದ ಕಲ್ಮಶದಿಂದ ತುಂಗಭದ್ರಾ ನದಿ ನೀರು ಕಲುಷಿತಗೊಂಡಿರುವ ಬಗ್ಗೆ.

ಶ್ರೀ ಕೆ. ಮಲ್ಲಪ್ಪ.— ಅಧ್ಯಕ್ಷರೆ, ನಾನು ತುಂಗಭದ್ರಾ ನದಿಯ ನೀರಿಗೆ ಹರಿಹರ ಫಾಲಿಫೈಬರ್ ಕಂಪನಿಯವರು ಕಲ್ಮಶಗಳನ್ನು ಹೊರದೂಡುತ್ತಿರುವುದರಿಂದಾಗಿ ನದಿಯ ನೀರು ಕಲುಷಿತಗೊಂಡು ಜಾನುವಾರುಗಳಿಗೆ ಹಾಗೂ ಸಾರ್ವಜನಿಕರಿಗೆ ರೋಗ ಹರಡುತ್ತಿರುವ ವಿಚಾರದ ಬಗ್ಗೆ ಮಾನ್ಯ ಕೈಗಾರಿಕಾ ಮಂತ್ರಿಗಳ ಗಮನವನ್ನು ಸೆಳೆಯುತ್ತಿದ್ದೇನೆ.